

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 Issue : 244 Wednesday 05-06-2024 E-mail : maruti.b.hosamani76@gmail.com Page: 4 Price : Rs. 1/-


## "ಬದುಕು ಬರಹ".....



ಈ ಬರಹ ಬದುಕಾಗಿದೆ
ಕೊನೆಯೆಂಬ ಜೀವನಕೆ
ಆಸರೆಯಾಗಿ ಬಂದಿದೆ
ಈ ಕವನ ಈ ಕಥನ ಜೀವಂತವಾಗಿದೆ
ಬರಡಾದ ಬದುಕಿಗೆ ಆಸರೆಯಾಗಿ
ಗರಿಕೆ ಹಿಡಿದಾಗೆ ಫೀಲ್ ಆಗಿದೆ !!

ಈ ಬರವಣಿಗೆ ತಾಳ್ಮೆಯ ತಂದು
ಜಗವ ನೋಡೋ ರೀತಿ ಮಾಡಿದೆ
ಅಗೋಚರವೆಲ್ಲ ಹೊಸತನದಿಂದ
ಕಣ್ಮುಂದೆ ಬಂದು ನಿಂತಿದೆ
ನಗೆಯ ಒಮ್ಮೆ ಸೂಸಿ ದುಃಖವ ಮರೆಸಿದೆ
ಒಂಟಿ ಜೀವಕೆ ಶುಭ ಸೂಚನೆ ನೀಡಿದೆ !!

ಒಂಟಿ ನೀನಲ್ಲ ಎಂದೂ ಸಾರಿದೆ
ಈ ಕವನ ಈ ಕಥನ ಬರೆದಂತೆ
ಬರೆಸುವ ಬೇಡೆಂದರೆ ಅಳಿಸುವ
ಅಧಿಕಾರ ನನ್ನದು.ಹೊಸತನದ
ಯೋಚನೆ ನನ್ನದು ಅದಕಾಗಿ ಖುಷಿ
ತಂದಿದೆ ಇನ್ನು ಖುಷಿ ನನ್ನದೆ !!

ಕೊನೆಯಿಲ್ಲ ಎಂದಿಗೂ ಬರೆದಷ್ಟು
ಬರೆಸಿಕೊಳ್ಳುವ ಬರಹ ನನ್ನದು
ನಾ ಇರೊವರೆಗೂ ನನ್ನ ಜೊತೆಯೇ
ಇರಬಲ್ಲದು ನನ್ನ ಬರಹವು
ಅವಿತು ಬರೆಯುವೆ ಅರಿತು ಬರೆಯುವೆ
ಹೊಸತನ ನೀಡುವೆ ಈ ಪ್ರೀತಿಯ
ಬರಹಕೆ
ಅಭಿಮಾನ ನಿಮ್ಮದು..!!



– ಈ ರವೀಶ ಅಕ್ಕರ
ಸಂಸ್ಥಾಪಕ ಅಧ್ಯಕ್ಷ
ವಿಶ್ವ ಕನ್ನಡ ಕಲಾ ಸಂಸ್ಥೆ
ಮೊ : 9611419145

## ಪಿ.ಸಿ ಗದ್ದಿಗೌಡರ 5ನೇ ಬಾರಿಗೆ ಗೆಲುವು: ವಿಜಯೋತ್ಸವ ಆಚರಿಸಿದ ಮಾಜಿ ಶಾಸಕರು ಹಾಗೂ ಕಾರ್ಯಕರ್ತರು

**ಹುನಗುಂದ** : ಬಾಗಲಕೋಟ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಪಿ.ಸಿ.ಗದ್ದಿಗೌಡರ ಅವರು ಪ್ರತಿಸ್ಪರ್ಧಿ ಕಾಂಗ್ರೆಸ್ನ ಸಂಯುಕ್ತ ಪಾಟೀಲ ಸೋಲಿಸುವ ಮೂಲಕ ಐದನೆಯ ಬಾರಿಗೆ ವಿಜಯ ಸಾಧಿಸಿದ ಬೆನ್ನಲ್ಲೆ ಹುನಗುಂದ ಪಟ್ಟಣದಲ್ಲಿ ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ನೇತೃತ್ವದಲ್ಲಿ ಅದ್ದೂರಿ ವಿಜಯೋತ್ಸವವನ್ನು ಆಚರಿಸಲಾಯಿತು.

ಮಂಗಳವಾರ ಲೋಕಸಭೆ ಚುನಾವಣೆಯ ಮತ ಎಣಿಕೆ ಮುಗಿಯುತ್ತಿದ್ದಂತೆ ಪಿ.ಸಿ.ಗದ್ದಿಗೌಡರ ಐದನೆಯ ಬಾರಿಯ ಗೆಲ್ಲುವನ್ನು ಹೊತ್ತುಕೊಂಡು ಹುನಗುಂದ ಪಟ್ಟಣದ ಶ್ರೀ ವಿಜಯ ಮಹಾಂತೇಶ ವೃತ್ತಕ್ಕೆ ಆಗಮಿಸುತ್ತಿದ್ದಂತೆ ಬಿಜೆಪಿ ಮುಖಂಡರು, ಕಾರ್ಯಕರ್ತರು ಮತ್ತು ಅಭಿಮಾನಿಗಳು ತಂಡೋಪ ತಂಡವಾಗಿ ಆಗಮಿಸಿ ಶ್ರೀ ವಿಜಯಮಹಾಂತ ಶ್ರೀಗಳ





ಪುತ್ಥಳಿಗೆ ಹೂವು ಮಾಲೆ ಹಾಕಿ ನಂತರ ಪಕ್ಷದ ಮುಖಂಡರು, ಕಾರ್ಯಕರ್ತರು, ದೊಡ್ಡನಗೌಡರ ಪಾಟೀಲರಿಗೆ ಹೂಮಾಲೆ ಹಾಕಿ, ಗುಲಾಲ್ ಎರಚಿ, ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮದ ವಿಜಯೋತ್ಸವವನ್ನು ಆಚರಿಸಲಾಯಿತು.

ಈ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ಗದ್ದಿಗೌಡರ ಒಬ್ಬ ಮುತ್ಸದ್ದಿತನ ನಾಯಕತ್ವಕ್ಕೆ ಸಿಕ್ಕ ಜಯ ಇದಾಗಿದೆ, ಚುನಾವಣೆ ಪ್ರಚಾರ ಸಂದರ್ಭದಲ್ಲಿ ಅವರ ಬಗ್ಗೆ ಹೀನಾಯ ಪದಗಳನ್ನು ಬಳಸಿದ್ದರೂ ಸಹಿತ ಕಾಂಗ್ರೆಸ್ಸಿಗರ ಮಾತಿಗೆ ಕಿವಿಗೊಡದ ಮತದಾರ ಪ್ರಭುಗಳು ಗದ್ದಿಗೌಡರ ಅಭಿವೃದ್ದಿಗೆ ಮನಸೋತು ಸತತವಾಗಿ 5 ನೇ ಬಾರಿಗೆ ಅವರನ್ನು ಸಂಸದರನ್ನಾಗಿ ಆಯ್ಕೆ ಮಾಡಿದ್ದಾರೆ. ಅವರ ಗೆಲ್ಲುವಿಗೆ ಶ್ರಮಿಸಿದ ಪಕ್ಷದ ಮುಖಂಡರಿಗೆ, ಕಾರ್ಯಕರ್ತರಿಗೆ, ಪಕ್ಷದ ಅಭಿಮಾನಿಗಳಿಗೆ ನಾನು ವೈಯಕ್ತಿಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತನೆ, ಬಾಗಲಕೋಟಿ ಲೋಕಸಭೆ ಮತ ಕ್ಷೇತ್ರದಲ್ಲಿ ಕಾಂಗ್ರೆಸ್ ಗ್ಯಾರಂಟಿ ನಡೆಯಲಿಲ್ಲ, ಇಲ್ಲಿ ಮೋದಿ, ಗದ್ದಿಗೌಡರ ಅಭಿವೃದ್ಧಿ ಕಾರ್ಯ ಕೆಲಸ ಮಾಡಿದೆ ಎಂದರು.

ಈ ಸಂದರ್ಭದಲ್ಲಿ ಖ್ಯಾತ ವೈದ್ಯ ಡಾ. ಮಹಾಂತೇಶ ಕಡಪಟ್ಟಿ,ಡಾ. ಬಸವರಾಜ ಕಡಿವಾಲ, ಅಮರೇಶ ಹವಾಲ್ದಾರ, ರಾಜಕುಮಾರ ಬಾದವಾಡಗಿ, ಅಪ್ಪು ಆಲೂರ, ಮುತ್ತಣ್ಣ ರೋಣದ, ವಿರುಪಾಕ್ಷ ಹಿರೇಮಠ, ಮಂಜು ಆಲೂರ, ಮುನ್ನಾ ಬಾಗವಾನ, ಶ್ರೀಶೈಲ ಹಂಡಿ, ಮಹಾಂತೇಶ ಚಿತ್ತವಾಡಗಿ, ಮಲ್ಲು ಚೂರಿ, ರಮೇಶ ಗೊವಿನಗಿಡದ, ಮಹಾಂತೇಶ ಹಂಡಿ ಸೇರಿದಂತೆ ಇತರರು ಇದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ.ಎಂ.ಬಂಡರಗಲ್ಲ ಹುನಗುಂದ.**

## ಸತತವಾಗಿ 4ನೇ ಬಾರಿಗೆ ಗೆಲುವು ಸಾಧಿಸಿದ ರಮೇಶ್ ಜಿಗಜಿಣಗಿ: ಕಲಕೇರಿ ಗ್ರಾಮಸ್ಥರಿಂದ ಜೈಕಾರ




**ಕಲಕೇರಿ** : ವಿಜಯಪುರ ಲೋಕಸಭಾ ಚುನಾವಣೆಯ ನಾಲ್ಕನೇ ಬಾರಿಗೆ ಭರ್ಜರಿ ಗೆಲುವನ್ನು ಸಾಧಿಸಿದಂತ ಅಭ್ಯರ್ಥಿಯಾದ ರಮೇಶ್ ಜಿಗಜಿಣಗಿ ಇವರಿಗೆ ಕಲಕೇರಿ ಗ್ರಾಮದ ಬಿಜೆಪಿಯ ಕಾರ್ಯಕರ್ತರು ಜೆಡಿಎಸ್ ಕಾರ್ಯಕರ್ತರು ರಮೇಶ್ ಜಿಗಜಿಣಗಿ ಅವರಿಗೆ ಜೈಕಾರ ಹಾಕಿ ಮದ್ದು ಹಾರಿಸಿ ಎಲ್ಲಾ ಕಾರ್ಯಕರ್ತರಿಗೆ ಪೇಡಾ ಅಂಚಿ ವಿಜಯಪುರ ಲೋಕಸಭಾ ಚುನಾವಣೆ ಅಭ್ಯರ್ಥಿಯಾದ ರಮೇಶ್ ಜಿಗಜಿಣಗಿ ಅವರಿಗೆ ಅಭಿನಂದನೆಗಳು ಸಲ್ಲಿಸಿ ಬಿಜೆಪಿಯ ಹಾಗೂ ಜೆಡಿಎಸ್ ಕಾರ್ಯಕರ್ತರು ಜಯಘೋಷ ಹಾಕಿದರು. ರಮೇಶ್ ಜಿಗಜಿಣಗಿ ಅವರಿಗೆ ಗ್ರಾಮಸ್ಥರು ಎಲ್ಲರೂ ಸೇರಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ,ಅಪ್ಪು ದೇಸಾಯಿ. ಸುಧಾಕರ್ ಅಡಿಕಿ. ಅಶೋಕ್ ಭೋವಿ. ಹಣಮಂತ್ ವಡ್ಡರ್. ಎಲ್ಲಪ್ಪ ಹೊಸಮನಿ. ಮುದುಕಣ್ಣ ಬೂದಿಹಾಳ. ಸೋಮಶೇಖರ್ ಸಜ್ಜನ್. ರಮೇಶ್ ಹೆಂಡಿ. ಆನಂದ್ ಅಡಿಕಿ. ಪ್ರಕಾಶ್ ಯರನಾಳ. ಗುರು ಕಡಕೋಳ. ವಿಶ್ವನಾಥ್ ಸಬರದ. ಪ್ರವೀಣ್ ಜಗ ಶೆಟ್ಟಿ. ಎಲ್ಲರೂ ಕಾರ್ಯಕರ್ತರು ಸೇರಿ ಅಭಿನಂದನೆಗಳನ್ನು ಸಲ್ಲಿಸಿ ಜಯಘೋಷ ಹಾಕಿದರು ಎಂದು ತಿಳಿಸಿದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮೈಬೂಬಬಾಷ ಮನಗೂಳಿ ತಾಳಿಕೋಟೆ**

## ಕೊಪ್ಪಳ ಆರ್‌ಸೆಟಿ: ವಿವಿಧ ತರಬೇತಿಗಳಿಗೆ ಅರ್ಜಿ ಆಹ್ವಾನ

**ಕೊಪ್ಪಳ** : ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವ-ಯಂ ಉದ್ಯೋಗ ತರಬೇತಿ ಸಂಸ್ಥೆ ಕೊಪ್ಪಳ ವತಿಯಿಂದ ಜಿಲ್ಲೆಯ ಗ್ರಾಮೀಣ ಭಾಗದ ಆಸಕ್ತರಿಗೆ ಮೊಬೈಲ್ ರಿಪೇರಿ, ಮೋಟಾರ್ ರಿವೈಂಡಿಂಗ್ ಮತ್ತು ಪಂಪ್‌ಸೆಟ್ ರಿಪೇರಿ ಹಾಗೂ ಕುರಿ ಸಾಕಾಣಿಕೆ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

30 ಮೊಬೈಲ್ ರಿಪೇರಿ, ಮೋಟಾರ್ ರಿವೈಂಡಿಂಗ್ ಮತ್ತು ಪಂಪ್‌ಸೆಟ್ ರಿಪೇರಿ ತರಬೇತಿ ಹಾಗೂ 10 ದಿನಗಳ ಕುರಿ ಸಾಕಾಣಿ-ಕೆ ತರಬೇತಿಯನ್ನು ಊಟ ಮತ್ತು ವಸತಿಯೊಂದಿಗೆ ಉಚಿತವಾಗಿ ನೀಡಲಾಗುವುದು. ಕನಿಷ್ಠ ಎಂಟನೇ ತರಗತಿ ಉತ್ತೀರ್ಣರಾದ 18 ರಿಂದ 45 ವರ್ಷದೊಳಗಿನ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಜಿಲ್ಲೆಯ ಗ್ರಾಮೀಣ ಭಾಗದವರಾಗಿರಬೇಕು.

## ಸತತವಾಗಿ 5 ನೇ. ಬಾರಿಗೆ ಬಾಗಲಕೋಟ ಗದ್ದುಗೇರಿದ ಪಿ.ಸಿ ಗದ್ದಿಗೌಡರ


**ಇಲಕಲ್ಲ** : ಬಾಗಲಕೋಟೆ ಲೋಕಸಭಾ ಚುನಾವಣೆಯಲ್ಲಿ ನಿರೀಕ್ಷಿಸಿದಂತೆ ಬಿಜೆಪಿ ಜಯಭೇರಿ ಬಾರಿಸಿದೆ. ತನ್ನ ಭದ್ರ ಕೋಟೆಯನ್ನು ಬಿಜೆಪಿ ಉಳಿಸಿ ಕೊಂಡಿದೆ. ಪಿ.ಸಿ.ಗದ್ದಿಗೌಡರ ಕೇಸರಿ ಬಾವುಟ ಹಾರಿಸಿದ್ದಾರೆ.

ಮತ ಎಣಿಕೆಯ ಸಂದರ್ಭದಲ್ಲಿ ಮೊದಲೆರಡು ಸುತ್ತುಗಳಲ್ಲಿ ಮಾತ್ರ ಕಾಂಗ್ರೆಸ್ ಎರಡು ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಮುನ್ನಡೆ ಸಾಧಿಸಿತ್ತು. ಇದನ್ನು ಬಿಟ್ಟರೆ, ಉಳಿದ 17 ಸುತ್ತುಗಳಲ್ಲಿ ಬಿಜೆಪಿ ಮತಗಳು ಏರಿಕೆಯಾಗಿ ಕೊನೆಗೆ 68,399 ಮತಗಳ ಅಂತರದಿಂದ ಪಿ.ಸಿ.ಗದ್ದಿಗೌಡರಿಗೆ ಗೆಲುವಾಯಿತು. ಪಿ.ಸಿ.ಗದ್ದಿಗೌಡರು ಪಡೆದ ಒಟ್ಟು ಮತಗಳು 6,71,039 (6,67,441 +3,598 ಅಂಚೆ ಮತಗಳು).

ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪಾಟೀಲ್ ಪಡೆದ ಒಟ್ಟು ಮತಗಳು– 6,02,640 (6,00,741+1,899 ಅಂಚೆ ಮತಗಳು). ಬಿಜೆಪಿ ಪಡೆದ ಒಟ್ಟು ಲೀಡ್– 68,399 ಮತಗಳು.

ಉತ್ತರ ಕರ್ನಾಟಕದ ಪ್ರಮುಖ ಕ್ಷೇತ್ರಗಳಲ್ಲಿ ಒಂದಾಗಿರುವ ಬಾಗಲಕೋಟೆ ಲೋಕಸಭಾ ಕ್ಷೇತ್ರದ ಅಂತಿಮ ಫಲಿತಾಂಶ ಹೊರ ಬಿದ್ದಿದೆ. ಬಿಜೆಪಿ ಅಭ್ಯರ್ಥಿ ಪಿ.ಸಿ ಗದ್ದಿಗೌಡರ್ (P.C.Gaddigoudar) ಅವರು ಗೆಲುವು ಸಾಧಿಸಿದ್ದು, ಈ ಮೂಲಕ 5 ನೇ. ಬಾರಿಗೆ ಗೆಲುವಿನ ಗದ್ದುಗೆ ಏರಿದ್ದಾರೆ

ಲಿಂಗಾಯತ ಸಮುದಾಯದ ಪ್ರಾಬಲ್ಯ ಇರುವ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಯಿಂದ ಲಿಂಗಾಯತ ಅಭ್ಯರ್ಥಿಗಳೇ ಅಖಾಡದಲ್ಲಿದ್ದರು. ಹೀಗಾಗಿ ಪೈಪೋಟಿಯನ್ನು ಮತ್ತಷ್ಟು ಹೆಚ್ಚಿಸಿತ್ತು. ಪಿ.ಸಿ ಗದ್ದಿಗೌಡರ ಅವರು ಸ್ಪರ್ಧಿಸಿದರೆ, ಇತ್ತ ಕಾಂಗ್ರೆಸ್ನಿಂದ ಮೊದಲ ಬಾರಿ ಸಚಿವ ಶಿವಾನಂದ ಪಾಟೀಲ್ ಪುತ್ರಿ



ಸಂಯುಕ್ತಾ ಪಾಟೀಲ್ (Samyukta Patil) ಅದೃಷ್ಟ ಪರೀಕ್ಷೆಗೆ ಇಳಿದು ಸೋತಿದ್ದಾರೆ.

ಗದ್ದಿಗೌಡರ ಅವರು ಸಂಯುಕ್ತಾ ಪಾಟೀಲ್ ವಿರುದ್ಧ 6,83,99 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಗದ್ದಿಗೌಡರಿಗೆ 6,71,039 ಮತಗಳು ಬಿದ್ದರೆ, ಸಂಯುಕ್ತಾ ಪಾಟೀಲ್ ಅವರು 6,02,640 ಮತಗಳನ್ನು ಗಳಿಸಿದ್ದಾರೆ. ಈ ಮೂಲಕ ಸಂಯುಕ್ತಾ ಪಾಟೀಲ್ ಅವರು ಮೊದಲ ಪ್ರಯತ್ನದಲ್ಲಿ ಸಂಸತ್ ಪ್ರವೇಶಿಸಲು ವಿಫಲರಾದರು.

ಕಳೆದ ಚುನಾವಣೆಯಲ್ಲಿ ಏನಾಗಿತ್ತು?: 2019 ರಲ್ಲಿ ನಡೆದ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿದ್ದ ಪಿ.ಸಿ.ಗದ್ದಿಗೌಡರ್ 1,68,187 ಮತಗಳ ಅಂತರದಿಂದ ಗೆಲುವು ದಾಖಲಿಸಿ ಸತತ ನಾಲ್ಕನೆಯ ಬಾರಿ ಸಂಸದರಾಗಿ ಆಯ್ಕೆಯಾದರು. ಕಾಂಗ್ರೆಸ್–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ವೀಣಾ ಕಾಶಪ್ಪನವರ್ ಭಾರೀ ಅಂತರದ ಸೋಲು ಅನುಭವಿಸಿದರು. ರಾಜ್ಯದಲ್ಲಿ ಮೈತ್ರಿ ಸರ್ಕಾರವಿದ್ದರೂ ಬಿಜೆಪಿ ಅಭ್ಯರ್ಥಿ ಗೆದ್ದು ಸೋಲಿಲ್ಲದ ಸರದಾರ ಎನಿಸಿ ಕೊಂಡಿದ್ದಾರೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್.ವಾಯ್.ಕಿಳ್ಳಿ ಇಲಕಲ್ಲ.**

## ಡಿಎಸ್‌ಎಸ್ ಜಿಲ್ಲಾ ಸಂಚಾಲಕರಾಗಿ ಬಿ. ಯಶೋಧರ ಕೂಡಲ ಸಂಗಮ ರವರ ಆಯ್ಕೆ

**ಹುನಗುಂದ** : ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮೂಲ ಸಂಘಟನೆಯಿಂದ 2002/03 ರಲ್ಲಿ ಐಹೊಳೆ ದೇಸಗತ್ತಿ ಮನೆತನದ ಹೆಚ್ಚುವರಿ ಭೂಮಿಯ ವಿಚಾರ ಕೈಗೆತ್ತಿಕೊಂಡು ಜಾಥಾದಲ್ಲಿ ತಾಲೂಕ ಸಂಘಟನಾ ಸಂಚಾಲಕರಾಗಿದ್ದ ಬಿ. ಯಶೋಧರ. ಕೂಡಲ ಸಂಗಮ ಅವರು ಬದಲಾದ ಸಮಯದಲ್ಲಿ ತಟಸ್ಥರಾಗಿದ್ದರು.

ಪುನಃ ಅವರು ಕರ್ನಾಟಕ ದಲಿತ ಸಂಘರ್ಷ ಸಮಿತಿ ಮಹಾತ್ಮ ಪ್ರೊಟಟ ಬಿ. ಕೃಷ್ಣಪ್ಪ ಸ್ಥಾಪಿತ ರಿ.ನಂ–386/2020–21 ಬಾಗಲಕೋಟ ಜಿಲ್ಲಾ ಸಮಿತಿಯಲ್ಲಿ ಪಾಲ್ಗೊಳ್ಳುವ ವಿಚಾರ ನಮ್ಮ ಅತ್ಯಾಪ್ತರ ಬಳಿ ಅವರು ಇಂಗಿತ ವ್ಯಕ್ತಪಡಿಸಿದ್ದರ ು. ಬಿ. ಯಶೋಧರ ರವರ ಕ್ರೀಯಾಶೀಲ ಕಾರ್ಯ ಚಟುವಟಿಕೆಯನ್ನು ಗುರುತಿಸಿ ಅವರನ್ನು ಬಾಗಲಕೋಟ ಜಿಲ್ಲೆಯ ಜಿಲ್ಲಾ ಸಂಚಾಲಕರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕರು ಮಾರುತಿ ಬಿ.



ಹೊಸಮನಿ ತಿಳಿಸಿದ್ದಾರೆ.

ತತಕ್ಷಣ ಕಾರ್ಯ ಪ್ರವೃತ್ತರಾಗಿ ಜಿಲ್ಲಾ ಸಂಚಾರ ಕೈಗೊಂಡು ಜಿಲ್ಲೆಯ ಆಯಾ ತಾಲೂಕಿನ ಪದಾಧಿಕಾರಿಗಳ ಆಯ್ಕೆ ಮಾಡಲು ಸೂಚಿಸಿ, ಆದೇಶಿಸಿ ಪತ್ರಿಕಾ ಪ್ರಕಟಣೆಗೆ ತಿಳಿಸಿದೆ.

## "ಹಸಿರಿನ ಮಡಿಲಲಿ ನಮ್ಮ ಉಸಿರು"

ಮನುಷ್ಯನಿಗೂ ಪ್ರಕೃತಿಗೂ ಅವಿನಾಭಾವ ಸಂಬಂಧ ಈ ಸಂಬಂಧವು ಶಾಶ್ವತವಾಗಿ ಉಳಿದರೆ ಮಾತ್ರ ಭೂಮಿಯ ಮೇಲೆ ಮನುಷ್ಯನ ಜೀವನ ಸಾಧ್ಯ ಇಲ್ಲವೆಂದರೆ ಮನುಷ್ಯನ ನಾಶ ಶತಸಿದ್ಧ. ಈ ಭೂಮಿಗಿಂತ ಅತ್ಯುತ್ತಮವಾದ ಸ್ಥಳ ಬೇರೊಂದಿಲ್ಲ, ಆದ್ದರಿಂದ ಶ್ರಮವಾದರೂ ಸರಿಯೇ ನಮ್ಮ ಭೂಮಿಯನ್ನು ರಕ್ಷಿಸೋಣ. ಉಸಿರಿಗಾಗಿ ಪರಿಸರ. ಹಸಿರನ್ನೇ ಉಸಿರಾಡಿ, ಹಸಿರಿನ ಜತೆಗೆ ಜೀವಿಸಿ, ಹಸಿರಿನ ಜತೆಗೆ ಮುಂದಿನ ಜೀವನ ಪಯಣ ಸಾಗಿಸೋಣ. ಪ್ರತಿ ವರ್ಷ ಜೂನ್ 5 ರಂದು ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತದೆ. ಆದ್ದರಿಂದ ಎಲ್ಲರಿಗೂ ವಿಶ್ವ ಪರಿಸರ ದಿನದ ಶುಭಾಶಯಗಳು.

ಮಾನವನಿಗೆ ಪರಿಸರವು ಅತ್ಯಮೂಲ್ಯ ಕೊಡುಗೆ-ಯಾಗಿದೆ ಇಂದು ಪರಿಸರವು ಮಾನವರಿಗೆ ನೀಡಿದ ಎಲ್ಲವನ್ನು ಗೌರವಿಸಲು ಮತ್ತು ಕೃತಜ್ಞರಾಗಿರಲು ಮತ್ತು ಅದನ್ನು ರಕ್ಷಿಸುವ ಪ್ರತಿಜ್ಞೆಯನ್ನು ತೆಗೆದುಕೊಳ್ಳಲು ವಿಶ್ವ ಪರಿಸರ ದಿನವನ್ನು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಅಗತ್ಯಗಳಿಗಷ್ಟೇ ಸಂಪನ್ಮೂಲ ಬಳಸಿ ಭವಿಷ್ಯಕ್ಕೆ ಉಳಿಸಿ ಬದುಕುವುದು ನಮ್ಮ ಹಿರಿಯರು ಪಾಲಿಸಿದ ಆಚರಣೆ. ಅದನ್ನೇ ನಾವೂ ಅನುಸರಿಸಬೇಕೆಂಬುದೇ ಕೊರೋನ ಕಲಿಸಿದ ಪಾಠದ ತಿರುಳು. ವಿಶ್ವ ಪರಿಸರ ದಿನವಾದ ಇಂದು ನಮ್ಮ ಬದುಕನ್ನು ಪರಿಸರಸ್ನೇಹಿಯಾಗಿಸುವ ಪ್ರತಿಜ್ಞೆ ಮಾಡೋಣ.

ಮಾಲಿನ್ಯ ಮತ್ತು ನೈಸರ್ಗಿಕ ಸಂಪನ್ಮೂಲಗಳ ಕೊರತೆಯಿಲ್ಲದ ಸುಂದರ ಜಗತ್ತನ್ನು ಸೃಷ್ಟಿಸುವುದು ವಿಶ್ವ ಪರಿಸರ ದಿನದ ಹಿಂದಿನ ಕಲ್ಪನೆ. ಪ್ಲಾಸ್ಟಿಕ್ ನಿಷೇಧ, ಹೆಚ್ಚು ಮರಗಳು ಮತ್ತು ಗಿಡಗಳನ್ನು ನೆಡುವುದು, ನೀರನ್ನು ಉಳಿಸುವುದು, ಮರುಬಳಕೆ ಮಾಡುವುದು ಮತ್ತು ವನ್ಯಜೀವಿಗಳು ಮತ್ತು ಪ್ರಾಣಿಗಳನ್ನು ಉಳಿಸುವುದು ಉತ್ತಮ ಪರಿಸರಕ್ಕೆ ಕಾರಣವಾಗುವ ಕೆಲವು ಹಂತಗಳಾಗಿವೆ. ನಾವು ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಬೇಕು ಮತ್ತು ಅವುಗಳನ್ನು ಸಮರ್ಥವಾಗಿ ಮತ್ತು ಎಚ್ಚರಿಕೆಯಿಂದ ಬಳಸಬೇಕು. ಒಟ್ಟಾರೆ ನಾವು ಸುಂದರವಾದ ಮತ್ತು ಆರೋಗ್ಯಕರವಾದ ವಾತಾವರಣವನ್ನು ನಿರ್ಮಿಸಬೇಕು.

ಇಂದು ನಾವು ಅನುಭವಿಸುತ್ತಿರುವ ನೀರು ಗಾಳಿ ಬೆಳಕು ಇವೆಲ್ಲ ಪ್ರಕೃತಿ ದತ್ತವಾಗಿ ಉಚಿತವಾಗಿ ಈ ನಿಸರ್ಗದಿಂದ ಪಡೆಯುತ್ತಿದ್ದೇವೆ. ಒಬ್ಬ ಮನುಷ್ಯನು ಬದುಕಬೇಕಾದರೆ ಭೂಮಿ, ನೀರು, ಗಾಳಿ, ಬೆಳಕು ಇವೆಲ್ಲ ಬೇಕೇ ಬೇಕು. ಇವೆಲ್ಲವೂ ಸುರಕ್ಷಿತವಾಗಿ ಸಂರಕ್ಷಣೆಯಿಂದ ಇರಬೇಕೆಂದರೆ ನಾವು ಪರಿಸರವನ್ನು ಸಂರಕ್ಷಿಸಬೇಕು. ಪರಿಸರ ಸಂರಕ್ಷಣೆಯಿಂದ ಇರಬೇಕೆಂದರೆ ನಾವು ಗಿಡಮರಗಳನ್ನು ಬೆಳೆಸಬೇಕು, ನದಿ ಕೆರೆ ಹಳ್ಳಗಳನ್ನು ಸ್ವಚ್ಛವಾಗಿಡಬೇಕು ಮತ್ತು ಗಾಳಿ ಕಲುಷಿತಗೊಳ್ಳದಂತೆ ನೋಡಿಕೊಳ್ಳಬೇಕು. ಈ ನಿಸರ್ಗ ನಮಗೆ ಏನು ಕೊಟ್ಟಿದೆ ಎನ್ನುವುದಕ್ಕಿಂತ ನಾವು ನಿಸರ್ಗಕ್ಕೆ ಏನು ಕೊಟ್ಟಿದ್ದೇವೆ ಎನ್ನುವುದು ಮುಖ್ಯ. ನಾವು ಪ್ರಕೃತಿಗೆ ಏನು ಕೊಡದೇ ಇದ್ದರೂ ಪರವಾಗಿಲ್ಲ ಅದನ್ನು ನಾಶ ಮಾಡದೇ ಇದ್ದರೆ ಅಷ್ಟೇ ಸಾಕು.

ಮನುಜ ಅನ್ನ ನೀರಿಲ್ಲದೆ ಬದುಕಬಹುದೇನೋ? ಆದ-ರೆ ಹಸಿರಿನ ಶುದ್ಧ ಉಸಿರು ಇರದಿದ್ದರೆ ಬದುಕುವುದು ಕಷ್ಟ ಸಾಧ್ಯ. ಬಾಲ್ಯದಲ್ಲಿಯೇ ಪರಿಸರ ಅರಿವು ಮಕ್ಕಳಲ್ಲಿ ಮೂಡಿಸಬೇಕಿದೆ. ವೈಯಕ್ತಿಕ ಸ್ವಚ್ಛತೆ, ಪರಿಸರ ಸ್ವಚ್ಛತೆ ಕಲಿಸಲು ಕೊರೋನಾದಂತಹ ವೈರಸ್ ಬರಬೇಕಾಯಿತು. ದೇವರಿದ್ದ ಕಡೆ ದುಷ್ಟಶಕ್ತಿಗಳು ಸುಳಿಯುವುದಿಲ್ಲವಂತೆ.



ಪರಿಸರವೇ ದೇವರು, ಸ್ವಚ್ಛತೆ ದೈವತ್ವ. ಮನುಕುಲದ ಉಳಿವಿಗಾಗಿ ಪರಿಸರವನ್ನು ರಕ್ಷಿಸಿ ಉಳಿಸಿ ಬೆಳೆಸಬೇಕಿದೆ. ಪರಿಸರ ಸ್ವಚ್ಛತೆ ನಮ್ಮೆಲ್ಲರ ಹೊಣೆ ಹಸಿರೇ ಉಸಿರು, ಹಸಿರೇ ಜೀವನ.

ಪ್ರತಿಯೊಬ್ಬ ಮನುಷ್ಯನ ಜೀವವು ಉಳಿದಿರುವುದು ಪ್ರತಿಯೊಂದು ಸಸ್ಯವು ತಾನು ಉಸಿರಾಡುವ ಕೆಟ್ಟ ಗಾಳಿಯನ್ನು ಪಡೆದು ನಮಗಾಗಿ ಒಳ್ಳೆಯ ಗಾಳಿಯನ್ನು ಕೊಟ್ಟು ನಮ್ಮ ಜೀವವನ್ನು ರಕ್ಷಿಸುವ ಪರಿಸರ ನಮ್ಮೆಲ್ಲರ ಜೀವ ರಕ್ಷಕ. ಪ್ರತಿಯೊಂದು ಮನೆಯಲ್ಲೂ ಮಕ್ಕಳಿರಬೇಕು ಪ್ರತಿಯೊಂದು ಮನೆಯಲ್ಲೂ ಮರವಿರಬೇಕು ಮನೆಗೊಂದು ಮರ ಊರಿಗೊಂದು ವನವಾದರೆ ಪರಿಸರ ಸುಮಧುರವಾಗುದರಲ್ಲಿ ಸಂದೇಹವಿಲ್ಲ. ಮರಗಳನ್ನ ಬೆಳೆಸುತ್ತಾ ಹೋದರೆ ಮಳೆ ಬೆಳೆಗೆ ತೊಂದರೆಯಾಗದೆ ಅನ್ನಕ್ಕು ಬರವಿಲ್ಲದೆ ಉತ್ತಮ ಜೀವನ ನಡೆಸಲು ವನರಾಶಿಯ ಸಹಕಾರ ನಮಗಾಗಿ ಇರಲೇಬೇಕು ಪ್ರತಿಯೊಬ್ಬ ನಾಗರಿಕನು ಕೂಡ ತಿಳಿದುಕೊಳ್ಳಬೇಕಾದ ವಿಷಯವಿದು.

ಭಾರತೀಯರೆಂದು ಮಣ್ಣಿನ ಮಕ್ಕಳು, ನಿಸರ್ಗದ ಪೂಜ-ಕರು. ಆದರೆ ಆಧುನಿಕತೆ ಹೆಚ್ಚಾದಾಗಿನಿಂದ ಅತಿಯಾಸೆ ದುರಾಸೆಯೂ ಹೆಚ್ಚಾಗಿ ಮನುಷ್ಯ ರಾಕ್ಷಸನಾಗಿ ಬದಲಾದ. ಹೀಗಾಗಿ ನೆರಳು ಕೊಡುವ ಮರವನು ಕಡಿ-ದು, ನೀರು ಕೊಡುವ ನದಿಯ ನುಂಗಿ, ಔಷಧಿಯಿಂದ ತುಂಬಿದ ಕಾಡನು ನಾಶ ಮಾಡಲು ಪ್ರಾರಂಭಿಸಿದ. ಇದರಿಂದ ಮಾನವನ ಅಳಿವಿನ ಜೊತೆಗೆ ಪರಿಸರವು ಅಳಿವಿನ ಅಂಚಿಗೆ ಬಂದು ನಿಂತಿದೆ. ಅದಕ್ಕೆ ಹೇಳೋದು "ಮಾಡಿದ್ದುಣ್ಣೋ ಮಹರಾಯ ಅಂತಾ." ಈಗಲಾದರೂ ಮಾನವ ಎಚ್ಚೆತುಕೊಂಡು ಕಾಡಿನ ಬೆಳವಣಿಗೆಗೆ ಸಹಕರಿಸಿ, ಜಲ, ನೆಲ ಹಾಗೂ ಜೀವಿಗಳ ಅಭಿವೃದ್ಧಿಗೆ ಅಣಿಯಾಗಬೇಕು, ಆಗ ಇಡೀ ಭೂಮಿಯೇ ಹಸುರಿನ ನಂದನವಾಗಿ, ನಮ್ಮ ಬದುಕು ಚಂದನವಾಗಿ ಸುಗಂಧ ಹರಡಲು ಸಾಧ್ಯ.

ಮಾನವನ ಅಳಿವು ಉಳಿವು ನಿಂತಿರುವುದು ಈ ಭೂಮಿ ಮೇಲಿನ ಪರಿಸರದಿಂದ ಮಾತ್ರ. ನಮ್ಮ ಬದುಕಿಗೆ ಉಸಿರು ಎಷ್ಟು ಮುಖ್ಯವೋ ಅಷ್ಟೇ ಹಸಿರು ಕೂಡ ಪ್ರಾಮುಖ್ಯವಾಗಿದೆ. ಹಸಿರೇ ಉಸಿರು ಎಂಬಂತೆ ಬದುಕುವ ಪ್ರಸಂಗ ನಮ್ಮದಾಗಿದೆ. ಎಲ್ಲೆಲ್ಲೋ ಸ್ವರ್ಗವ ಹುಡುಕಬೇಡಿ ಪರಿಸರವೇ ನಮ್ಮ ಸ್ವರ್ಗವಾಗಿದೆ ನೋಡಿ ಪರಿಸರವನ್ನು ವರ್ಣಿಸಲು ಅಸಾಧ್ಯವಾದದು.

ಪರಿಸರ ಮತ್ತು ಮಾನವನ ಸಂಬಂಧ ಅನ್ಯೋನ್ಯವಾಗಿದೆ. ಎರಡು ಅಂಶಗಳು ಒಂದನ್ನೊಂದು ಅವಲಂಬಿಸಿವೆ. ಮಾನವ ತನ್ನ ಜೀವಿತಾವಧಿಯಲ್ಲಿ ಪರಿಸರದ ಅಜೈವಿಕ ಅಂಶಗಳಾದ ಗಾಳಿ, ನೀರು, ಆಹಾರ ಮುಂತಾದವುಗಳನ್ನು ಅವಲಂಬಿಸಿರುತ್ತಾನೆ. ಪರಿಸರ ತನ್ನ ಅಸ್ತಿತ್ವಕ್ಕಾಗಿ ಮಾನವನ ಚಟುವಟಿಕೆಗಳನ್ನು ಅವಲಂಬಿಸಿರುತ್ತದೆ. ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ನಾಣ್ಯದ ಯಾವುದೇ ಒಂದು ಮುಖ ವಿಕಾರವಾದರೆ ನಾಣ್ಯಕ್ಕೆ ಬೆಲೆ ಇರುವುದಿಲ್ಲ. ಹಾಗೆಯೇ ಪರಿಸರ ನಾಶವಾದರೆ ಮಾನವನಿಗೆ ಉಳಿಗಾಲವಿಲ್ಲ. ಮಾನವನ ನಾಶವಾದರೆ ಪರಿಸರ ಉಳಿಯುವುದಿಲ್ಲ. ಎರಡೂ ಅಂಶಗಳ ರಕ್ಷಣೆ ನಮ್ಮೆಲ್ಲರ ಹೊಣೆ. ನಮ್ಮ ಸುತ್ತಮುತ್ತಲಿನ ಪ್ರದೇಶದಲ್ಲಿ ಹಸಿರಿನ ಜೊತೆ ಹಸನಾದ ವಾತಾವರಣ ಸೃಷ್ಟಿ ಮಾಡಬೇಕಿದೆ. ಈ ಪರಿಸರದ ಪ್ರೀತಿ ಮತ್ತು ಆರೈಕೆಯ ಜವಾಬ್ದಾರಿ ಎಲ್ಲರ ಉಸಿರಾಗಿರಲಿ. ಅದುವೇ ನಮ್ಮ ಜೀವಕ್ಕೆ ಉಸಿರು ನೀಡುತ್ತದೆ ನೆನಪಿರಲಿ.

ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ. ಆದರೂ ರಕ್ಷಣೆ ಮಾಡುತ್ತಿಲ್ಲ ನಾವು ಅದಕ್ಕೋಸ್ಕರ ತಾನೇ ಇಷ್ಟೆಲ್ಲ ನೋವು. ಗಿಡವನ್ನು ನೆಡೋಣ, ಮರವಾಗಿ ಬೆಳೆಸೋಣ, ತಂಪಾದ ಗಾಳಿ ಸವಿಯೋಣ, ಪರಿಸರ ಮಾಲಿನ್ಯವನ್ನು ತಡೆಯೋಣ, ಬತ್ತಿ ಹೋಗುತ್ತಿರುವ ಭೂಮಿಯನ್ನು ಹಚ್ಚ ಹಸಿರಾಗಿಸೋಣ ಪರಿಸರದ ಸಂಕೇತ ಹಸಿರು, ಈ ಹಸಿರೇ ನಮ್ಮ ಉಸಿರು, ಉಳಿಸೋಣ ಪರಿಸರವ ಪರಿಸರವಿದ್ದರೆ ನಮ್ಮ ಜೀವ.

**– ಕು. ಜ್ಯೋತಿ ಆನಂದ ಚಂದುಕರ ಬಾಗಲಕೋಟ**

## "ಪರಿಸರ ಪ್ರೇಮಿಯಾಗು"...

**ಪರಿಸರ ಸಂರಕ್ಷಣೆ ಎಲ್ಲರ ಹೊಣೆಯಾಗಬೇಕು
ಹಸಿರನ್ನು ಉಳಿಸಲು ಬೇಗ ಅಣಿಯಾಗಬೇಕು
ಒಬ್ಬರಿಗೆ ಒಂದರಂತೆ ಸಸಿಯ ನೆಡಿ ಸಾಕು
ಗೊಬ್ಬರ ನೀರಿರೆದು ಅದ ಬೆಳಸಬೇಕು.**

**ಪರಿಸರ ನಾಶವು ಕೆಡಕನು ತರುವುದು
ಮರ-ಗಿಡ ಬೆಳೆಸಲು ಪುಣ್ಯ ಸಿಗುವುದು
ಪರಿಸರ ಸಂರಕ್ಷಣೆ ಕರ್ತವ್ಯವಾಗಿರುವುದು
ಸೃಷ್ಟಿಯು ದೇವರ ವರವಾಗಿರುವುದು.**

**ಮಾನವನ ದುರಾಸೆಯಿಂದ ಪರಿಸರ ಹಾಳಾಗುತಿದೆ
ಇದು ಮಾನವನಿಂದಲೇ ಸರಿಯಾಗಬೇಕಿದೆ
ಮುಂದಿನ ಪೀಳಿಗೆಗೆ ಪರಿಸರದ ಬಗ್ಗೆ ಕಾಳಜಿ
ಮೂಡಿಸಬೇಕಾಗಿದೆ
ಇಲ್ಲದಿದ್ದರೆ ಮುಂದೆ ಹೆಚ್ಚಿನ ಅಪಾಯ ಎದುರಾಗಲಿದೆ.**

**ನಿಸರ್ಗದ ಉಳಿವಿಗೆ ಬೆಳವಣಿಗೆಗೆ ಕಾರ್ಯೋನ್ಮುಖನಾಗು
ಸಸಿನೆಟ್ಟು ನೀರಸುರಿಸಿ ಬೆಳೆಸಲು ಸಾಧಕನಾಗು
ಮುತ್ತಿನ ಮಳೆ ಹನಿ ಬೀಳಲು ಸಹಾಯಕನಾಗು
ಮುಂದಿನ ಪೀಳಿಗೆಗೆ ಪ್ರೇರಕನಾಗು ಪರಿಸರ ಪ್ರೇಮಿಯಾಗು.**

* * *

**। ಕು. ಜ್ಯೋತಿ ಆನಂದ ಚಂದುಕರ
ಬಾಗಲಕೋಟ**

# ಭೂ-ಮಾಫಿಯಾ ಮಟ್ಟ ಹಾಕಲು ಮಾಜಿ ಸಚಿವ ಪಟ್ಟಣಶೆಟ್ಟಿ ಆಗ್ರಹ



**ವಿಜಯಪುರ :** ನಗರದಲ್ಲಿ ನಕಲಿ ಭೂ ದಾಖಲೆ ಸೃಷ್ಟಿಸಿ ಜನರನ್ನು ವಂಚಿಸುತ್ತಿರುವ ಭೂ-ಮಾಫಿಯಾವನ್ನು ಸಂಪೂರ್ಣವಾಗಿ ಮಟ್ಟ ಹಾಕಬೇಕೆಂದು ಮಾಜಿ ಸಚಿವ ಅಪ್ಪಾಸಾಹೇಬ(ಅಪ್ಪು) ಮ. ಪಟ್ಟಣಶೆಟ್ಟಿ ಆಗ್ರಹಿಸಿದ್ದಾರೆ.

ಈ ಕುರಿತು ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಬೇಟಿ ಮಾಡಿ ಮನವಿ ಮಾಡಿದ ಅವರು, ನಗರದಲ್ಲಿ ನಕಲಿ ಭೂ-ದಾಖಲೆ ಸೃಷ್ಟಿ ಮಾಡಿ ಜನರನ್ನು ದೊಡ್ಡ ಪ್ರಮಾಣದಲ್ಲಿ ವಂಚನೆ ಮಾಡುತ್ತಿರುವ ಅನೇಕ ಪ್ರಕರಣಗಳು ನಡೆಯುತ್ತಿವೆ. ಇದರಿಂದ ಬಡಜನರು ನಿತ್ಯ ಶೋಷಣೆಗೊಳಗಾಗುತ್ತಿದ್ದಾರೆ. ಜಮೀನು ಹಾಗೂ ನಿವೇಶನಗಳ ಖೊಟ್ಟಿ ದಾಖಲೆ ಸೃಷ್ಟಿ ಮಾಡಿ ಉಪನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ಖರೀದಿ ಹಾಗೂ ಮಾರಾಟ ಮಾಡುವ ಕಾನೂನು ಬಾಹಿರ ಕೃತ್ಯಗಳು ಅವ್ಯಾಹತವಾಗಿ ನಡೆದಿವೆ. ಜನರನ್ನು ವಂಚಿಸುವ ವ್ಯವಸ್ಥಿತ ಜಾಲವೇ ಜಿಲ್ಲೆಯಲ್ಲಿ ಹುಟ್ಟಿಕೊಂಡಿದೆ.

ಈ ಜಾಲಕ್ಕೆ ಈಗಾಗಲೇ ನೂರಾರು ಜನ ಹಣ-ಆಸ್ತಿ ಕಳೆದುಕೊಂಡಿದ್ದಾರೆ. ಇಂತಹ ವಂಚಕರ ಜಾಲ ವಿಜಯಪುರ ಜಿಲ್ಲೆ ಹಾಗೂ ನಗರದಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ.

ಸಾಕಷ್ಟು ಬಡ ಜನರು ಈಗಾಗಲೇ ಮೋಸ ಹೋಗಿದ್ದಾರೆ. ಕಷ್ಟಪಟ್ಟು ದುಡಿದು, ಸಾಲ-ಸೋಲ ಮಾಡಿ ನಿವೇಶನ, ಜಮೀನು ಖರೀದಿ ಮಾಡುವ ಬಡವರು, ಈ ರೀತಿಯ ವಂಚನೆಗೆ ಒಳಗಾಗಿ ತಮ್ಮ ಆಸ್ತಿ ಕಳೆದುಕೊಂಡು ಕಷ್ಟ ಅನುಭವಿಸುತ್ತಿದ್ದಾರೆ.

ಈ ಜಾಲಕ್ಕೆ ಸಿಲುಕಿ ವಂಚನೆಗೊಳಗಾದವರು ಹಾಗೂ ಜಮೀನು ಕಳೆದುಕೊಂಡವರು ಪೊಲೀಸ್ ಠಾಣೆಗೆ ದೂರು ನೀಡಿದರೂ ಯಾವ ಪ್ರಯೋಜನವೂ ಆಗುತ್ತಿಲ್ಲ. ಇದಕ್ಕೆ ಸಂಬಂಧಿಸಿದಂತೆ ತನಿಖೆ ಸಮರ್ಪಕವಾಗಿ ನಡೆಯುತ್ತಿಲ್ಲ. ಹೀಗಾಗಿ ನೊಂದ ಬಡವರಿಗೆ ನ್ಯಾಯ ದೊರಕುತ್ತಿಲ್ಲ. ಬಡಜನರಿಗೆ ನ್ಯಾಯ ಒದಗಿಸುವ ದೃಷ್ಟಿಯಿಂದ ಇಂತಹ ಪ್ರಕರಣಗಳನ್ನು ತ್ವರಿತಗತಿಯಲ್ಲಿ ತನಿಖೆ ಮಾಡಲು ವಿಶೇಷ ತನಿಖಾ ತಂಡ ರಚನೆ ಮಾಡಬೇಕು ಎಂದು ಒತ್ತಾಯಿಸಿದರು.

ಕೂಡಲೇ ಈ ರೀತಿಯ ಪ್ರಕರಣಗಳನ್ನು ಬೇಧಿಸಿ ಮೂಲ ಮಾಲೀಕರಿಗೆ ಅವರ ಜಮೀನು-ನಿವೇಶನ ಪುನ: ಹಂಚಿಕೆಯಾಗುವ ನಿಟ್ಟಿನಲ್ಲಿ ವಿಶೇಷ ಕಾರ್ಯಾಚರಣೆ ಮಾಡಬೇಕು.

ಜಿಲ್ಲೆಯಲ್ಲಿ ಈ ರೀತಿಯ ಭೂ ಮಾಫಿಯಾವನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಪಟ್ಟಣಶೆಟ್ಟಿ ಆಗ್ರಹಿಸಿದರು.

# ರೈತರ ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕ ಹೆಚ್ಚಿನ ಬೆಲೆಗೆ ಮಾರಾಟ ಮಾಡಬಾರದು, ಕಳಪೆ ಮಾರಾಟ ಮಾಡುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ರೈತ ಸಂಘದ ಆಗ್ರಹ



**ವಿಜಯಪುರ :** ರೈತರ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಜಿಲ್ಲೆಯ ಸಣ್ಣ ಸಣ್ಣ ಹೊಟೆಲ, ಕಿರಾಣಿ ಅಂಗಡಿ, ಝುರಾಕ್ಸ್ ಅಂಗಡಿಗಳಲ್ಲಿ ಮಾರಾಟ ಮಾಡುತ್ತಿದ್ದಾರೆ, ಇದನ್ನು ತಡೆಯಬೇಕಿದ್ದ ಅಧಿಕಾರಿಗಳು ಸಂಪೂರ್ಣ ವಿಫಲರಾಗಿದ್ದಾರೆ, ನಿಗದಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ ಎಂದು ಕರ್ನಾಟ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಅಂತವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು ಅವರ ಪರವಾನಿಗೆಯನ್ನು ಶಾಶ್ವತವಾಗಿ ರದ್ದು ಮಾಡಬೇಕೆಂದು ಆಗ್ರಹಿಸಿದರು.

ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅವರು ಮನವಿ ಸಲ್ಲಿಸಿ ಮಾತನಾಡುತ್ತಾ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಜಾಗೃತಿದಳ ಹೆಚ್ಚಿಗೆ ಮಾಡಿ, ಪ್ರತಿ ತಾಲೂಕಿನಲ್ಲಿ ಕಾರ್ಯಪ್ರವೃತ್ತರಾಗುವಂತೆ ಹಾಗೂ ಇಲಾಖೆಯ ಪರವಾನಿಗೆ ಪಡೆಯದೇ (ಪಿ.ಸಿ) ಅನಧಿಕೃತ ಮತ್ತು ಕಳಪೆ ಗುಣಮಟ್ಟದ ಬೀಜ, ರಸಗೊಬ್ಬರ, ಕೀಟನಾಶಕ ಮಾರಾಟ ಮಾಡುತ್ತಿರುವವರ ವಿರುದ್ಧ ಪ್ರಕರಣ ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು, ಇದರಿಂದ ಮುಗ್ಧ ರೈತರು ಅನ್ಯಾಯಕ್ಕೊಳಗಾಗಿ ಸಾಲದ ಬಾಧೆಯಿಂದ ರೈತ ಆತ್ಮಹತ್ಯೆ ಮಾಡಿಕೊಳ್ಳುವುದು ತಪ್ಪುತ್ತದೆ. ಅನಧಿಕೃತ ಟಾನಿಕ ಹೆಸರಿನಲ್ಲಿ ಬಯೋ ಎಂಭ ಹೆಸರಿನಲ್ಲಿ ವಿಷವನ್ನು ಮಾರಾಟ ಮಾಡುತ್ತಿರುವುದು ಕಂಡುಬಂದಿದೆ, ಅವುಗಳನ್ನು ತಜ್ಞರಿಂದ (ಲ್ಯಾಬ್‌ಟೆಸ್ಟ್) ತಪಾಸಣೆ ಮಾಡಿ, ರೈತರಿಗೂ ಹಾಗೂ ಸರಕಾರಕ್ಕೂ ಆಗುತ್ತಿರುವ ಮೊಸವನ್ನು ತಡೆಯಬೇಕು ಎಂದರು

ತಾಲೂಕಾ ಅಧ್ಯಕ್ಷರಾದ ಮಹದೇವಪ್ಪ ತೇಲಿ ಅವರು ಮಾತನಾಡುತ್ತಾ ರೈತಸಂಪರ್ಕ ಕೇಂದ್ರಗಳಲ್ಲಿ ರೈತರಿಗೆ ರಿಯಾಯಿತಿ ದರದಲ್ಲಿ ಕೊಡುವ ತಾಡಪಾಲ, ಸ್ಪಿಂಕಲರ್ ಪೈಪ್, ಸ್ಪ್ರೇ ಪಂಪ್‌ಗಳು ಅಷ್ಟು ಹೇಳಿಕೊಳ್ಳುವಂತಹ ಗುಣಮಟ್ಟದಿಂದ ಕೂಡಿಲ್ಲ, ಅಧಿಕಾರಿಗಳಿಗೆ ಕೇಳಿದರೆ ನಮಗೆ ಗೊತ್ತಿಲ್ಲ, ಮೇಲಿನಿಂದ ಹೀಗೆ ಬಂದಿವೆ ನಾವೇನು ಮಾಡುವುದು ಎನ್ನುತ್ತಿದ್ದಾರೆ, ಆದ್ದರಿಂದ ಒಟ್ಟಾರೆಯಾಗಿ ರೈತರಿಗೆ ಅನ್ಯಾಯವಾಗದ ಹಾಗೆ ಸರಿಯಾಗಿ ಗುಣಮಟ್ಟದ ವಸ್ತುಗಳನ್ನು ಕೊಡಿ, ಯಾಕೆಂದರೆ ಒಮ್ಮೆ ಸರಕಾರದ ಯೋಜನೆ ಪಡೆದರೆ 7 ವರ್ಷ ಮತ್ತೆ ತೆಗೆದುಕೊಳ್ಳಲು ಬರುವುದಿಲ್ಲ ಅಂತಾರೆ ಎಂದರು. ಈ ವೇಳೆ ತಾ. ಉಪಾಧ್ಯಕ್ಷರಾದ ಪ್ರಕಾಶ ತೇಲಿ , ಆಹೇರಿ ಗ್ರಾ.ಪಂ ಮಮಾಜಿ ಅರ್ಧಕ್ಷರಾದ ಬಸವರಾಜಗಾಣಗೇರ, ರಾಮಸಿಂಗರಜಪೂತ ಬಸವರಾಜಹಡಪದ, ಅಶೋಕಕನ್ನೂರ ,ರಾಜಾರಾಮಸಿಂಗ ಕೊಳುರ, ಬಸವರಾಜ ಗುದಳೆ, ರವಿ ಗೆರಡೆ, ಶ್ರೀಶೈಲ ಮಸೂತಿ, ರಾಜು ಕೇರೂರ, ಬಸವರಾಜ ಮಸೂತಿ, ರಾಜಾರಾಮಸಿಂಗ ಡೊಣೂರ, ಹಣಮಂತ ಶೆಗಣೂಶಿ, ಪರಸು ಚಿಕ್ಕಲಕಿ, ಬಸವರಾಜ ಕಲ್ಬುರ್ಗಿ, ಮಲುಕು ಅಕ್ಕಿಹುಗ್ಗಿ, ಮಲ್ಲನಗೌಡ ಬಿರಾದಾರ, ಸೋಮಯ್ಯ ದೊಡಮನಿ, ಮಹಾಂತೇಶಹತ್ತರಕಿ, ಭೀಮು ಚಿಮ್ಮಲಗಿ, ಮಹಾಂತೇಶ ಗೆರಡೆ ಸೇರಿದಂತೆ ಇತರರು ಇದ್ದರು.

# ಕರ್ತವ್ಯ ನಿಷ್ಠೆ ಮೆರೆದ ಸಂಸ್ಥೆಯ ಭದ್ರತಾ ಸಿಬ್ಬಂದಿ ಗೋವಿಂದರಾಜು

– ರಾಜು ಕಾಂಬಳೆ

**ಬೆಂಗಳೂರು :** ಇಂದಿನ ದಿನಮಾನದಲ್ಲಿ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ನೌಕರರು ಹಾಗೂ ಸಿಬ್ಬಂದಿಗಳು ತಮ್ಮ ಮಗ ಅಥವಾ ಮಗಳ ಮದುವೆಗೆ ಹದಿನೈದು ದಿನಗಳಿಂದ ಒಂದು ತಿಂಗಳಿನವರೆಗೆ ಕಛೇರಿಗಳಲ್ಲಿ ರಜೆಯನ್ನು ತೆಗೆದುಕೊಳ್ಳುತ್ತಾರೆ. ಇಷ್ಟೊಂದು ದಿನ ರಜೆ ತೆಗೆದುಕೊಳ್ಳುವುದು ಮಾಮೂಲಾಗಿಬಿಟ್ಟಿದೆ.

ಆದರೆ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯ ಕರ್ನಾಟಕ ರಾಜ್ಯ ಕಾರ್ಮಿಕ ಅಧ್ಯಯನ ಸಂಸ್ಥೆಯ ಭದ್ರತಾ ಸಿಬ್ಬಂದಿ ಗೋವಿಂದರಾಜು ತಮ್ಮ ಮಗಳ ಮದುವೆಯು ದಿನಾಂಕ 29/05/2024 ಮತ್ತು 30/05/2024ರ ಬುಧವಾರ ಹಾಗೂ ಗುರುವಾರ ನೆರವೇರಿತು. ಆದರೆ ಗೋವಿಂದರಾಜು ಮಾತ್ರ ಸಂಸ್ಥೆಯ ಭದ್ರತಾ ಸೇವೆಗೆ ರಜೆಯನ್ನು ಪಡೆಯದೇ ಸೇವೆ ಸಲ್ಲಿಸಿರುತ್ತಾರೆ. ಕರ್ತವ್ಯವನ್ನು ಮುಗಿಸಿಕೊಂಡು ಅದರ ಜೊತೆಗೆ ಮಗಳ ಮದುವೆಯನ್ನು ಕೂಡ ಯಶಸ್ವಿಯಾಗಿ ನೆರವೇರಿಸಿರುತ್ತಾರೆ.




ಇದು ಗೋವಿಂದರಾಜು ಅವರ ಕರ್ತವ್ಯ ನಿಷ್ಠೆಯನ್ನು ತೋರಿಸುತ್ತದೆ.

ಕರ್ತವ್ಯ ಮಾಡಿ, ಮಗಳ ಮದುವೆ ಮಾಡಿರುವ ಗೋವಿಂದರಾಜು ಅವರಿಗೆ ಕರ್ನಾಟಕ ರಾಜ್ಯ ಕಾರ್ಮಿಕ ಅಧ್ಯಯನ ಸಂಸ್ಥೆಯ ನಿರ್ದೇಶಕರು, ರಿಜಿಸ್ಟ್ರಾರ್ ಮತ್ತು ಸಿಬ್ಬಂದಿ ವರ್ಗದವರು ಶುಭ ಹಾರೈಸಿರುತ್ತಾರೆ. ಹಾಗೂ ಇಂದಿನ ನೌಕರರಿಗೆ ಗೋವಿಂದರಾಜು ಮಾದರಿಯಾಗಿರುತ್ತಾರೆ.



# ಸರ್ಕಾರಿ ಪಾಲಿಟೆಕ್ನಿಕ್ ಕೋರ್ಸುಗಳ ಪ್ರವೇಶ ಆರಂಭ

**ಬೆಳಗಾವಿ :** 2024-25 ನೇ ಸಾಲಿನ ಬೆಳಗಾವಿಯ ಸರಕಾರಿ ಪಾಲಿಟೆಕ್ನಿಕ್‌ನಲ್ಲಿ ವಿಶೇಷ ವಿಕಲಚೇತನ ವಿದ್ಯಾರ್ಥಿಗಳಿಗೆ ಮೂರು ವರ್ಷದ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಸಿವಿಲ್ ಇಂಜಿನೀಯರಿಂಗ್ (4), ಎಲೇಕ್ಟ್ರಿಕಲ್ ಮತ್ತು ಎಲೇಕ್ಟ್ರಾನಿಕ್ಸ್ (4), ಮೆಕಾನಿಕಲ್ (3), ಆಟೋಮೊಬೈಲ್ (2), ಎಲೇಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ ಇಂಜಿನಿಯರಿಂಗ್ (5), ಕಮರ್ಶಿಯಲ್ ಪ್ರಾಕ್ಟಿಸ್ (ಇಂಗ್ಲೀಷ್ 3), ಕಮರ್ಶಿಯಲ್ ಪ್ರಾಕ್ಟಿಸ್ (ಕನ್ನಡ 4) ಒಟ್ಟು 25 ಕೋರ್ಸುಗಳು ಲಭ್ಯವಿರುತ್ತದೆ.

ಆಸಕ್ತರು ಎಸ್,ಎಸ್.ಎಲ್.ಸಿ ಅಂಕ ಪಟ್ಟಿ ಹಾಗೂ ಸಂಬಂದಿಸಿದ ವೈಧ್ಯಾದಿಕಾರಿಗಳಿಂದ ಪಡೆದ ಮೂಲ ವೈದ್ಯಕಿಯ ಪ್ರಮಾಣ ಪತ್ರಗಳ ಹಾಗೂ ಎಸ್,ಎಸ್.ಎಲ್.ಸಿ ಒಳಗೊಂಡಂತೆ 5 ವರ್ಷದ ಅವಧಿಗೆ ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಶಾಲೆ ಪ್ರಮಾಣ ಪತ್ರಗಳನ್ನು ತರಬೇಕು. ಈ ಕೋರ್ಸುಗಳಿಗೆ ಯಾವುದೇ ಶುಲ್ಕವಿರುವುದಿಲ್ಲ. ಸ್ಕಾಲರಶಿಪ್ ಹಾಗೂ ಲಭ್ಯವಿರುವ ಇತರೆ ಸೌಲಭ್ಯಗಳನ್ನು ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಿನ್ಸಿಪಾಲರು ಅವರ ಕಛೇರಿಗೆ ಭೇಟಿಯಾಗಬಹುದು ಎಂದು ಬೆಳಗಾವಿ ಸರ್ಕಾರಿ ಪಾಲಿಟೆಕ್ನಿಕ್ ಪ್ರಿನ್ಸಿಪಾಲರು ಪ್ರಕಟನೆಯಲ್ಲಿ ತಿಳಿಸಿದಾರೆ.

# ನೂರಕ್ಕೆ ನೂರು ದಾಖಲಾತಿ, ಹಾಜರಾತಿ



**ರಬಕವಿ-ಬನಹಟ್ಟಿ :** ಶಾಲೆಗಳು ಆರಂಭವಾಗಿದ್ದು , ನೂರಕ್ಕೆ ನೂರು ದಾಖಲಾತಿ ಮತ್ತು ನೂರಕ್ಕೆ ನೂರರಷ್ಟು ಹಾಜರಾತಿ ಕಡ್ಡಾಯವಾಗಿದೆ ಎಂದು ಜಮಖಂಡಿ ಕ್ಷೇತ್ರ ಶಿಕ್ಷಣ ಸಂಯೋಜಕ ಶ್ರೀಶೈಲ ಬುರ್ಲಿ ತಿಳಿಸಿದರು.

ಶುಕ್ರವಾರ ಇಲ್ಲಿನ ಸದಾಶಿವಪ್ಪನ ದೇವಸ್ಥಾನದ ಹತ್ತಿರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಅರ್ಹ ಮಕ್ಕಳನ್ನು ಗುರುತಿಸಿ ಶಾಲೆಗೆ ಕರೆದುಕೊಂಡು ಬಂದು ಪ್ರವೇಶ ಕೊಡಿಸುವಂತೆ ಅಂಗನವಾಡಿ ಕಾರ್ಯಕರ್ತೆಯರಿಗೆ ತಿಳಿಸಲಾಗಿದೆ. ಜೂನ್ ಮೂವತ್ತರವರೆಗೆ ಪ್ರವೇಶಕ್ಕೆ ಅನುಕೂಲ ಮಾಡಿಕೊಡಲಾಗಿದೆ. ಮಕ್ಕಳನ್ನು ಶಾಲೆಗೆ ಕರೆತರಲು ಪ್ರಭಾತಫೇರಿಗಳನ್ನು ನಡೆಸಲಾಗುವುದು. ಶಾಲೆಗೆ ಬರಲಾರದ ಮಕ್ಕಳನ್ನು ಪುನಃ ಶಾಲೆಗೆ ಕರೆದುಕೊಂಡು ಬನ್ನಿ. ಸರ್ಕಾರ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುತ್ತಿದೆ. ಪಾಲಕರು ಮಕ್ಕಳನ್ನು ಶಾಲೆಗೆ ಸೇರಿಸುವ ದಿಶೆಯಲ್ಲಿ ಗಮನ ನೀಡಬೇಕು. ಮಕ್ಕಳು ಮನೆಯಲ್ಲಿ ಓದುವಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಎಸ್. ಡಿ. ಎಂ. ಸಿ. ಸದಸ್ಯರಾದ ಕಾಡಪ್ಪ ಪಾಟೀಲ, ಶಂಕರ ಕುಳ್ಳಿ, ಮುಖ್ಯ ಶಿಕ್ಷಕಿ ಎಲ್. ಜಿ. ನಾಯ್ಕರ್, ಎನ್. ಎಂ. ಹುಣಶ್ಯಾಳ, ಎಲ್. ಎಚ್. ರಾಠೋಡ, ಎಸ್. ಎನ್. ಪೋಳ, ಎಸ್. ಎನ್. ಶಿಂಧೆ, ವಿ. ಸಿ. ಕೋಷ್ಠಿ, ಪಿ. ಬಿ. ಆಲಗೂರ ಉಪಸ್ಥಿತರಿದ್ದರು.

# ಆರೋಗ್ಯವಂತ ಸಮಾಜ ನಿರ್ಮಾಣ ಪ್ರತಿಯೊಬ್ಬರ ಕರ್ತವ್ಯ

**ರಬಕವಿ-ಬನಹಟ್ಟಿ :** ಆರೋಗ್ಯವಂತ ವ್ಯಕ್ತಿ ಮತ್ತು ಕುಟುಂಬದಿಂದ ಆರೋಗ್ಯವಂತ ಸಮಾಜವನ್ನು ನಿರ್ಮಾಣ ಮಾಡಬಹುದಾಗಿದೆ. ಆರೋಗ್ಯವಂತ ಸಮಾಜ ನಿರ್ಮಾಣ ಮಾಡುವಲ್ಲಿ ಪ್ರತಿಯೊಬ್ಬರ ಕರ್ತವ್ಯ ಮುಖ್ಯವಾಗಿದೆ ಎಂದು ಬನಹಟ್ಟಿ ನ್ಯಾಯಾಲಯದ ಸಹಾಯಕ ಸರ್ಕಾರಿ ಅಭಿಯೋಜಕಿ ಭವ್ಯ ಆರ್. ತಿಳಿಸಿದರು.

ಶುಕ್ರವಾರ ರಬಕವಿ ಬನಹಟ್ಟಿ ನ್ಯಾಯಾಲಯದಲ್ಲಿ ಕಾನೂನು ಸೇವಾ ಪ್ರಾಧಿಕಾರ ಹಾಗೂ ಇನ್ನಿತರ ಇಲಾಖೆಗಳು ಹಮ್ಮಿಕೊಂಡ ವಿಶ್ವ ತಂಬಾಕು ನಿಷೇಧ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ದುಶ್ಚಟಗಳಿಂದ ಸಮಾಜದಲ್ಲಿ ಇಂದು ಅನೇಕ ಅಪರಾಧಗಳು ನಡೆಯುತ್ತಿವೆ. ಮಹಿಳೆಯರು ಕೂಡಾ ದುಶ್ಚಟಗಳಿಂದ ದೂರವಿರಬೇಕು ಎಂದು ಭವ್ಯ ಆರ್. ತಿಳಿಸಿದರು.



ರಬಕವಿ ಬನಹಟ್ಟಿ ಸಮುದಾಯ ಕೇಂದ್ರದ ಡಾ. ಆಯೇಶಾ ತಾಂಬೋಳಿ ಮಾತನಾಡಿ, ಈ ವರ್ಷದ ಧ್ಯೇಯ ವಾಕ್ಯ ತಂಬಾಕು ಉದ್ಯಮದ ಹಸ್ತಕ್ಷೇಪದಿಂದ ಮಕ್ಕಳನ್ನು ರಕ್ಷಿಸುವುದಾಗಿದೆ. ತಂಬಾಕು ವ್ಯಸನದಿಂದಾಗಿ ಹೃದಯರೋಗ, ಕ್ಯಾನ್ಸರ್ ಸೇರಿದಂತೆ ಹಲವಾರು ರೋಗಗಳಿಗೆ ಬಲಿಯಾಗುತ್ತಿದ್ದಾರೆ ಎಂದು ತಿಳಿಸಿದರು.

ಸಮುದಾಯ ಕೇಂದ್ರದ ಆಪ್ತ ಸಮಾಲೋಚಕ ಎಂ. ಕೆ. ಮುಲ್ಲಾ ಮಾತನಾಡಿ, ತಂಬಾಕು ವ್ಯಸನಕ್ಕೆ ಅನೇಕ ಯುವಕರು ದಾಸರಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ತಂಬಾಕು ಮತ್ತು ತಂಬಾಕು ಉತ್ಪನ್ನಗಳ ಸೇವನೆಯಿಂದ ಪ್ರತಿವರ್ಷ ಹತ್ತು ಲಕ್ಷದಷ್ಟು ಜನರು ಬಲಿಯಾಗುತ್ತಿದ್ದಾರೆ. ಪ್ರತಿ ಎಂಟು ನಿಮಿಷಕ್ಕೆ ಒಬ್ಬ ಯುವಕ ತಂಬಾಕು ವ್ಯಸನಕ್ಕೆ ಒಳಪಡುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಪೌರಾಯುಕ್ತ ಜಗದೀಶ ಈಟಿ, ಆಪ್ತ ಸಮಾಲೋಚಕಿ ಭಾರತಿ ಕಲಶೆಟ್ಟಿ ಮಾತನಾಡಿದರು.

ಶಿರಸ್ತೆದಾರ ಎಸ್. ಎಲ್. ಕಾಗಿಯವರ, ವಕೀಲೆ ಸುಜಾತಾ ನಿಡೋಣಿ, ಅಪ್ಪಾಜಿ ಹೂಗಾರ, ಬಸವರಾಜ ಪಟ್ಟಣಶೆಟ್ಟಿ, ಸುರೇಶ ಬಾಗೇವಾಡಿ, ಶೋಭಾ ಹೊಸಮನಿ, ಸಂಗೀತಾ ಕೋಳಿ, ಚಿದಾನಂದ ಮಠಪತಿ, ಭೀಮು ಬಾಡಗಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಶಿಕ್ಷಕ ವೃತ್ತಿಯ ಸೇವೆ ನನಗೆ ತೃಪ್ತಿ ತಂದಿದೆ

**ರಬಕವಿ ಬನಹಟ್ಟಿ :** ತಾಲೂಕಿನ ನಾವಲಗಿ ಗ್ರಾಮದ ಶ್ರೀ ಜೈ ಹನುಮಾನ್ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಗುರು ಎಸ್. ಬಿ. ಎಂಟೆತ್ತಿನವರ ಸೇವಾ ನಿವೃತ್ತಿಯ ಬಿಳ್ಕೊಡುಗೆ ಕಾರ್ಯಕ್ರಮ ಜರುಗಿತು. ನಂತರ ಮಾತನಾಡಿದ ಅವರು ಶಿಕ್ಷಕ ವೃತ್ತಿಯಲ್ಲಿ ದೇವರನ್ನು ಕಾಣುವ ಹಾಗೂ ಕರ್ತವ್ಯದಲ್ಲಿ ಶ್ರದ್ಧೆ ಭಕ್ತಿ ನಿಷ್ಠೆಯಿಂದ ದುಡಿದ ತೃಪ್ತಿ ನನಗಿದೆ ಎಂದರು. ಈ ಸಂಸ್ಥೆಯು ನನಗೆ ಸಹಕಾರ ನೀಡಿದೆ. ನಮ್ಮ ಆಡಳಿತ ಮಂಡಳಿಯ ಸಹಕಾರ ನಾನೆಂದಿಗೂ ಮರೆಯಲಾರೆ ಎಂದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿಯ ಹಣಮಂತ ಬರಗಾಲ, ದಾನಪ್ಪ ಆಸಂಗಿ, ಬಾಲಚಂದ್ರ ಪಟ್ಟಣಶೆಟ್ಟಿ, ಮಲ್ಲು ಕಂಪು, ನಿಂಗಪ್ಪ ಕಾಂತಿ, ಮಲ್ಲಪ್ಪ ಗಣಿ, ಕಾಡಪ್ಪ ಯಡಪ್ಪನವರ, ಶಿಕ್ಷಕರಾದ ಎನ್. ಎಸ್. ತುಪ್ಪದ, ಶೋಭಾ ವಾರದ, ಹಾಲಪ್ಪ ಅಡವಿಹಳ್ಳಿ , ಜಿ. ಎಸ್. ಬಜೆನ್ನವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



**ರಬಕವಿ-ಬನಹಟ್ಟಿ : ಬನಹಟ್ಟಿಯ ನೂತನ ವಿದ್ಯಾಲಯದ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವದ ಅಂಗವಾಗಿ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಮಾಡಲಾಯಿತು. ಎಸ್. ಡಿ. ಎಂ. ಸಿ. ಅಧ್ಯಕ್ಷ ಕುಬೇರ ಸಾರವಾಡ, ಸದಸ್ಯರಾದ ಕುಮಾರ ಪಾವಟೆ, ಕಾಡನಗೌಡ ಪಾಟೀಲ, ಮುಖ್ಯ ಶಿಕ್ಷಕಿ ಬಿ. ಪಿ. ನುಚ್ಚಿ , ಸಹ ಶಿಕ್ಷಕರಾದ ಎ. ಎಸ್. ಚನಾಳ, ಕರ್ಕಿ, ರಾಜೇಶ್ವರಿ ಧುತ್ತರಗಾವಿ, ಗುಳನ್ನವರ, ಹಂಚಿನಾಳ, ಎನ್. ಬಿ. ಬುಲಿ9, ಬಾಣಕಾರ, ಕುಂಬಾರ, ಕೌಲಾಪುರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.**

# ಕುಲಹಳ್ಳಿ: ಹಬ್ಬದಂತಾದ ಶಾಲಾ ಪ್ರಾರಂಭೋತ್ಸವ

**ರಬಕವಿ-ಬನಹಟ್ಟಿ :** ತಾಲೂಕಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಇಂದು ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ನಡೆಸಿ ಸಡಗರ ಸಂಭ್ರಮದಿಂದ ಮಕ್ಕಳನ್ನು ಸ್ವಾಗತಿಸಲಾಯಿತು.

ತಾಲೂಕಿನ ಕುಲಹಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಜರುಗಿದ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಗ್ರಾಮದ ಧುರೀಣರು, ಎಸ್.ಡಿ.ಎಂ.ಸಿ. ಅಧ್ಯಕ್ಷರು, ಸದಸ್ಯರು, ಶಿಕ್ಷಕ ಸಿಬ್ಬಂದಿ ಮತ್ತು ಪಾಲಕರು ಸಡಗರದಿಂದ ಪಾಲ್ಗೊಂಡು ಇದೊಂದು ಗ್ರಾಮದ ಹಬ್ಬವೆಂಬಂತೆ ಸಂಭ್ರಮಿಸಿದರು. ಮೊದಲಿಗೆ ಗ್ರಾಮದ ಆರಾಧ್ಯದೈವ ಶ್ರೀ ಶಿವಲಿಂಗೇಶ್ವರ ( ಬಿಳಿಗುಡೆಪ್ಪ ) ದರ್ಶನ ಪಡೆದು ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸಿ, ಸರ್ಕಾರಿ ಶಾಲೆಗಳನ್ನು ಉಳಿಸಿ ಎಂಬ ಘೋಷಣೆ ಕೂಗುತ್ತ ಸಿಬ್ಬಂದಿ ಮತ್ತು ಮಕ್ಕಳು ಗ್ರಾಮದೆಲ್ಲೆಡೆ ಜಾಗ್ರತಿಗಾಗಿ ಪ್ರಭಾತ್ ಫೇರಿ ನಡೆಸಿದರು. ಶಾಲಾ ಆವರಣದಲ್ಲಿ ಆಗಮಿಸುತ್ತಿದ್ದಂತೆ ಮಕ್ಕಳನ್ನು ಪುಷ್ಪವೃಷ್ಠಿಗರೆದು, ಸಿಹಿ ಚಾಕೋಲೇಟ್ ಮತ್ತು ಪೆನ್ನು ನೀಡಿ ಸ್ವಾಗತಿಸಲಾಯಿತು.



ಈ ಸಂದರ್ಭದಲ್ಲಿ ಮಾತನಾಡಿದ ಪ್ರೌಢಶಾಲೆ ಮುಖ್ಯಾಧ್ಯಾಪಕ ಶಿವಾಜಿ ನಾಯ್ಕ್ ಸರ್ಕಾರಿ ಶಾಲೆಗಳೆಂದು ಮೂಗು ಮುರಿಯುತ್ತಿದ್ದ ಕಾಲ ಹೋಯಿತು. ಈಗ ಸರ್ಕಾರಿ ಶಾಲೆಗಳಲ್ಲಿ ಖಾಸಗಿ ಶಾಲೆಗಳಲ್ಲಿರದ ಟಿಇಟಿ ಪರೀಕ್ಷೆ ಪಾಸಾದ ಪ್ರತಿಭಾವಂತ, ನುರಿತ ಶಿಕ್ಷಕರು ಇದ್ದು, ಸರ್ಕಾರ ನೀಡುವ ಎಲ್ಲ ಸೌಲಭ್ಯಗಳನ್ನು ನೀಡುವ ಜೊತೆಗೆ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ಪ್ರತಿಭಾವಂತರು ಸರ್ಕಾರಿ ಶಾಲೆಗಳಲ್ಲಿ ತಯಾರಾಗುತ್ತಿದ್ದಾರೆ. ನಮ್ಮ ಶಿಕ್ಷಕರು ಸಕ್ಷಮ ಬೋಧನೆಯೊಡನೆ ಪ್ರಚಲಿತ ಜ್ಞಾನವನ್ನೂ ಮಕ್ಕಳಿಗೆ ತುಂಬುತ್ತಿರುವುದರಿಂದ ಸರ್ಕಾರಿ ಶಾಲೆಗಳಲ್ಲಿ ಪ್ರವೇಶಾತಿ ಹೆಚ್ಚುತ್ತಿದೆ. ಬೋಧಕ ವರ್ಗದವರು ಇಂಥ ಸ್ಥಿತಿಯಲ್ಲಿ ಇನ್ನಷ್ಟು ಹೆಚ್ಚು ಪರಿಣಾಮಕಾರಿ ಬೋಧನೆ ಮಾಡುವ ಮೂಲಕ ಗುಣಮಟ್ಟದಲ್ಲಿ ಸರ್ಕಾರಿ ಶಾಲೆಗಳೇ ಪ್ರಥಮ ಎಂದು ನಿರೂಪಿಸಬೇಕಿದೆ. ಗ್ರಾಮಸ್ಥರು, ಪಾಲಕರು ಮತ್ತು ಎಸ್. ಡಿ. ಎಂ. ಸಿ ಪದಾಧಿಕಾರಿಗಳು ನಮಗೆ ನೀಡುತ್ತಿರುವ ಪ್ರೋತ್ಸಾಹಕ್ಕೆ ಚ್ಯುತಿಯಾಗದಂತೆ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ನಾವೆಲ್ಲ ಶ್ರಮಿಸುತ್ತೇವೆಂದರು.

ವೇದಿಕೆಯಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷ ಪ್ರಕಾಶ ಕಂಕಣವಾಡಿ, ಗಿರಮಲ್ಲಪ್ಪ ಶಿರಗುಪ್ಪಿ, ಸಂಜೀವಕುಮಾರ ತಂಬಾಕು, ಬಂದೇನಮಾಜ್ ಸಂತಿ ಉಪಸ್ಥಿತರಿದ್ದು, ಪ್ರತಿ ಮಕ್ಕಳಿಗೆ ಚಾಕೋಲೇಟ್ ಮತ್ತು ಪೆನ್ನುಗಳನ್ನು ನೀಡಿದರು. ಬಸಪ್ಪ ತೇಲಿ ಸ್ವಾಗತಿಸಿದರು. ಮಹೇಶ ಬೆಲ್ಲದ ನಿರೂಪಿಸಿದರು. ದಾಕ್ಷಾಯಣಿ ಗೌಡರ ವಂದಿಸಿದರು.

ಚೆನ್ನಬಸಪ್ಪ ಸವದಿ, ಶ್ರೀಶೈಲ ಆಲ್ಯಾಳ, ಅಣ್ಣಾಸಾಹೇಬ ಪಡನಾಡ, ಸಿದ್ರಾಮ ಕೋನಶೆಟ್ಟಿ ಸೇರಿದಂತೆ ಪಾಲಕರು ಹಾಜರಿದ್ದರು.



## ಆರೋಪಿ ಕವಿತಾ ಮನೆಗೆ ಯೋಜನಾ ನಿರ್ದೇಶಕರ ಭೇಟಿ

**ಮಹಾಲಿಂಗಪುರ : ಭ್ರೂಣಹತ್ಯೆ ಆರೋಪಿ ಕವಿತಾ ಬಾಡನವರ ಮನೆಗೆ ಶುಕ್ರವಾರ ಬಾಗಲಕೋಟೆ ಜಿಲ್ಲಾ ನಗರಾಭಿವೃದ್ಧಿಕೋಶದ ಯೋಜನಾ ನಿರ್ದೇಶಕರಾದ ವಿಜಯ ಮೆಕ್ಕಳಕಿ ಭೇಟಿ ನೀಡಿ, ಪುರಸಭೆಯ ಅಧಿಕಾರಿಗಳಿಂದ ಭ್ರೂಣಹತ್ಯೆ ಪ್ರಕರಣದ ಮಾಹಿತಿ ಪಡೆದುಕೊಂಡರು.**

# ಸಮರ್ಥ ಅಭ್ಯರ್ಥಿ ಅಮರನಾಥ ಪಾಟೀಲ್‌ರಿಗೆ ಮತ್ತೊಮ್ಮೆ ಅವಕಾಶ ನೀಡಿ: ಶಿವರಾಮೇಗೌಡ

**ಕಾರಟಗಿ :** ಕಲ್ಯಾಣ ಕರ್ನಾಟಕ ಭಾಗದ ಸಮಸ್ಯೆಗಳಿಗೆ ಸದಾ ಸ್ಪಂದಿಸುವ, ಸದನದಲ್ಲಿ ಧ್ವನಿ ಎತ್ತಿ ಸರ್ಕಾರದ ಗಮನ ಸೆಳೆದು, ಸಮಸ್ಯೆಗಳ ನಿವಾರಣೆಗೆ ಕಟಿಬದ್ದರಾಗಿ ಕೆಲಸ ಮಾಡುವ ಅಮರನಾಥ ಪಾಟೀಲ ಸುಶಿಕ್ಷಿತ ಹಾಗೂ ಹೋರಾಟಗಾರರು. ಅವರಿಗೆ ಮತ್ತೊಂದು ಅವಕಾಶ ನೀಡಿ, ಗೆಲ್ಲಿಸಬೇಕಾದ ಅವಶ್ಯಕತೆ ಇದೆ ಎಂದು ಮಾಜಿ ಸಂಸದ ಶಿವರಾಮೇಗೌಡ ಹೇಳಿದರು.



ಪಟ್ಟಣದ ಮಾಜಿ ಶಾಸಕ ಬಸವರಾಜ ದಢೇಸೂಗೂರು ಕಚೇರಿಯಲ್ಲಿ ವಿಧಾನ ಪರಿಷತ್ ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಅಭ್ಯರ್ಥಿ ಅಮರನಾಥ ಪಾಟೀಲ ಪರ ಮಾತನಾಡಿದ ಅವರು, ರಾಜ್ಯದ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿಯನ್ನೇ ಮರೆತಿದೆ. ಕೇವಲ ಗ್ಯಾರಂಟಿ ಹೆಸರಿನಲ್ಲಿ ಭಾಷಣ ಮಾಡುತ್ತಾರೆ. ಸರ್ಕಾರ ನಡೆಸುವವರಿಗೆ ತಕ್ಕ ಪಾಠ ಕಲಿಸಿ. ಪದವೀಧರ ಮತದಾರರು ತಮ್ಮ ಪ್ರಜ್ಞೆ ಮೆರೆಯಬೇಕಿದೆ ಎಂದರು.

ಅಮರನಾಥ ಪಾಟೀಲ ಅವರು 2012ರಿಂದ 2018ರ ಅವಧಿಯಲ್ಲಿ ಗಮನ ಸೆಳೆಯುವಂತೆ ಕೆಲಸ ಮಾಡಿದ್ದಾರೆ. ಪಕ್ಷದ ಹಲವು ವಿಭಾಗಗಳಲ್ಲಿ ಕೆಲಸ ಮಾಡಿದ ಅನುಭವವಿದೆ. ಈ ಭಾಗದ ವಾಣಿಜ್ಯೋದ್ಯಮ, ಔದ್ಯೋಗೀಕರಣವಾಗಲು, ಸಮಸ್ಯೆಗಳ ನಿವಾರಣೆಯಾಗಲು ಮತ್ತೊಮ್ಮೆ ಅವರು ಗೆಲ್ಲಬೇಕಿದೆ ಎಂದರು.

ಮಾಜಿ ಶಾಸಕ ಬಸವರಾಜ ದಢೇಸೂಗೂರು ಮಾತನಾಡಿ, ಈ ಭಾಗದ ವಿದ್ಯಾರ್ಥಿಗಳು, ಯುವ ಜನರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮೇಲ್ಮನೆಯಲ್ಲಿ ಧ್ವನಿ ಎತ್ತಿ ಪರಿಹಾರ ಕಲ್ಪಿಸುವ ಸಾಮರ್ಥ್ಯ ಅಮರನಾಥ ಪಾಟೀಲರಗಿದೆ.

ಅನುಭವಿ, ಸುಶಿಕ್ಷಿತ, ಕ್ರಿಯಾಶೀಲ ವ್ಯಕ್ತಿತ್ವದ ಪಾಟೀಲ್ ಗೆಲುವು ಅಗತ್ಯವಾಗಿದೆ ಎಂದರು.

ಬಿಜೆಪಿ ಮುಖಂಡರಾದ ನಾಗರಾಜ್ ಬಿಲ್ಗಾರ್, ಅಮರೇಶ್ ಕುಳಗಿ, ಗುರುಸಿದ್ದಪ್ಪ ಯರಕಲ್, ಮಂಡಲ ಅಧ್ಯಕ್ಷ ಮಂಜುನಾಥ ಮಸ್ಕಿ,ಮಾಜಿ ಅಧ್ಯಕ್ಷಚಂದ್ರಶೇಖರ ಮುಸಾಲಿ, ಉಮೇಶ ಸಜ್ಜನ್, ಪುರಸಭೆ ಸದಸ್ಯ ಬಸವರಾಜ್ ಕೊಪ್ಪದ,ಶಿವಶರಣಪ್ಪಶಿವಪೂಜಿ, ವಿರುಪಾಕ್ಷಿ ತಿಮ್ಮಾಪುರ, ದೇವರಾಜ್ ಜೂರಟಗಿ, ಹನುಮಂತಪ್ಪ ಬೇವಿನಾಳ, ಸುರೇಶ ಬೆನ್ನೂರು, ಅಯ್ಯಪ್ಪ ಬಂಡಿ ಉಪಸ್ಥಿತರಿದ್ದರು.

# ಮಹಾರಾಷ್ಟ್ರ ಸರಕಾರದಿಂದ ರಾಜ್ಯಕ್ಕೆ ಬರುತ್ತಿದ್ದ ನೀರಿಗೆ ತಡೆ: ಬೆಳಗಾವಿಯಲ್ಲಿ ಆಕ್ರೋಶ



**ಬೆಳಗಾವಿ :** ಕೃಷ್ಣಾ ನದಿಯಿಂದ ರಾಜಾಪುರ ಬ್ಯಾರೇಜ್ ಮೂಲಕ ಕರ್ನಾಟಕಕ್ಕೆ ಹರಿದು ಬರುತ್ತಿದ್ದ ನೀರನ್ನು ತಡೆ ಮಹಾರಾಷ್ಟ್ರ ಸರಕಾರ ತಡೆಹಿಡಿದಿದ್ದು ಇದಕ್ಕೆ ಗಡಿ ಭಾಗದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಕಳೆದ ಎರಡು ದಿನಗಳಿಂದ ರಾಜಾಪುರ ಬ್ಯಾರೇಜ್ ಮೂಲಕ ಕೃಷ್ಣಾ ನದಿಗೆ ಸುಮಾರು ಎರಡು ಸಾವಿರ ಕ್ಯೂಸೆಕ್ಸ್ ಹೆಚ್ಚುವರಿ ನೀರು ಹರಿದು ಬರುತ್ತಿತ್ತು. ಆದರೆ ರವಿವಾರ ಮಹಾರಾಷ್ಟ್ರ ಸರ್ಕಾರ ಏಕಾಏಕಿ ನೀರನ್ನು ತಡೆ ಹಿಡಿದು ಕರ್ನಾಟಕ ರಾಜ್ಯದ ವಿರುದ್ಧ ಮತ್ತೆ ಜಲತಂಟೆ ಮುಂದುವರಿಸಿದೆ ಎಂದು ರೈತರು ಮತ್ತು ಕನ್ನಡ ಹೋರಾಟಗಾರರು ಆರೋಪ ಮಾಡಿದ್ದಾರೆ.

ಕರ್ನಾಟಕ–ಮಹಾರಾಷ್ಟ್ರ ಗಡಿ ಭಾಗದಲ್ಲಿರುವ ರಾಜಾಪೂರ ಬ್ಯಾರೇಜಗೆ ಗೇಟ್ ಅಳವಡಿಸಿಕೊಳ್ಳುವ ಮೂಲಕ ರಾಜ್ಯಕ್ಕೆ ಹರಿದು ಬರುವ ನೀರನ್ನು ತಡೆಹಿಡಿದಿರುವ ಮಹಾರಾಷ್ಟ್ರ ಸರ್ಕಾರ ಅಲ್ಲಿ ನೀರಾವರಿ ಇಲಾಖೆ ಮತ್ತು ಪೊಲೀಸ್ ಇಲಾಖೆ ಸಿಬ್ಬಂದಿಯನ್ನು ಸಹ ನಿಯೋಜನೆ ಮಾಡಿದೆ.

ನೀರನ್ನು ಯಾವ ಕಾರಣಕ್ಕೆ ತಡೆಹಿಡಿಯಲಾಗಿದೆ ಎಂಬುದರ ಬಗ್ಗೆ ಸರಕಾರ ಸ್ಪಷ್ಟನೆ ನೀಡಿಲ್ಲ. ನಾಲ್ವರು ಸಿಬ್ಬಂದಿಯ ಎರಡು ಗಸ್ತು ತಂಡ ನೇಮಕ ಮಾಡಿದ ಮಹಾರಾಷ್ಟ್ರ ಸರ್ಕಾರ ರಾಜ್ಯಕ್ಕೆ ನೀರು ಹೋಗದಂತೆ ನೋಡಿಕೊಳ್ಳುತ್ತಿದೆ. ಗೇಟ್ ಬಂದ್ ಮಾಡುವ ಮುನ್ನ ರಾಜಾಪುರ ಬ್ಯಾರೇಜ್ ದಿಂದ ಹರಿದು ಬರುತ್ತಿದ್ದ ನೀರು ಚಿಕ್ಕೋಡಿ, ವಿಜಯಪುರ, ಬಾಗಲಕೋಟ ಜಿಲ್ಲೆಗಳಿಗೆ ಹರಿದು ಹೋಗುತ್ತಿತ್ತು. ಈಗ ನೀರು ಬರದಂತೆ ತಡೆ ಹಿಡಿದಿರುವ ಪರಿಣಾಮ ಮತ್ತೆ ನದಿಗೆ ನೀರು ಕಡಿಮೆಯಾಗುವ ಸಾಧ್ಯತೆ ಹೆಚ್ಚಿದೆ.

# ಧಾರ್ಮಿಕ ಕ್ಷೇತ್ರದಲ್ಲಿ ಸೇವೆ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು

**ಹುಮನಾಬಾದ :** ಧಾರ್ಮಿಕ ಕ್ಷೇತ್ರದಲ್ಲಿ ಎಲ್ಲರೂ ಸೇವೆ ಸಲ್ಲಿಸುವ ಮನೋಭಾವ ಬೆಳೆಸಿಕೊಳ್ಳಬೇಕು..

ಯುವ ಜನತೆಯು ಗುರುಗಳ ಬಗ್ಗೆ. ಪೂಜ್ಯ ಭಾವನೆ ಇರಬೇಕು. ಎಂದು ರಾಜಕೀಯ ಧುರೀಣ ಸಚಿವ ಎಚ ಕೆ ಪಾಟೀಲ ಅವರ ಪುತ್ರ ಯುವ ನಾಯಕ ಕೃಷ್ಣ ಪಾಟೀಲ ಮಾತನಾಡಿದರು.

ಅವರು ಇಂದು ಶ್ರೀ ಮತಿ ಜಗದೇವಿ. ರಾಮರೆಡ್ಡಿ ದಂಪತಿಗಳಿಂದ ಆಯೋಜಿಸಿದ ಪೂಜ್ಯ ಎನ. ಬಿ. ರೆಡ್ಡಿಯವರ ಪೂಜಾ ಕಾರ್ಯಕ್ರದಲ್ಲಿ. ಮಾತನಾಡಿದರು.



ಕೃಷ್ಣ ಪಾಟೀಲ ಮಾತನಾಡುತ್ತ ಇಂದು ನಮ್ಮ ಹಿಂದೂ ಸನಾತನ ಧರ್ಮ ಉಳಿಸಿ ಬೆಳೆಸುವಲ್ಲಿ ಪೂಜ್ಯ ಎನ ಬಿ ರೆಡ್ಡಿ ಸದ್ಗುರುಜಿಯವರ ಪಾತ್ರ ಬಹುದೊಡ್ಡದು.. ಸದಾ ಪೂಜ್ಯರು ಪುರಾತನ ಕಾಲದ ದೇವಸ್ಥಾನಗಳನ್ನು ಅಭಿವೃದ್ಧಿ ಮಾಡಲು ಹಗಲಿರುಳು ಶ್ರಮಿಸುತ್ತಾರೆ. ಹೀಗಾಗಿ ಭಾರತದಾದ್ಯಂತ ದೇಶ ಸಂಚಾರ ಮಾಡಿ ಭಕ್ತರ ಏಳಿಗೆಗಾಗಿ ಪ್ರಾರ್ಥಿಸುವ ಗುಣ ಪೂಜ್ಯರಲ್ಲಿ ಮಾತ್ರ ಇಂದು ನಾವು ಕಾಣುತ್ತೇವೆ. ನಿಸ್ವಾರ್ಥ ಸೇವೆಯಿಂದ ಭಕ್ತರ ಪಾಲಿನ ಕಲ್ಪ ವೃಕ್ಷ ಆಗಿ ಇಂದು ಭಕ್ತ ಮನದಲ್ಲಿ ಗುರುವಿನ ಸ್ಥಾನ ಪಡೆದಿದ್ದಾರೆ ಎಂದರು.

ಅಭಿಷೇಕ ಪಾಟೀಲ ; ನಾನು ಸಮಾಜದಲ್ಲಿ ಹಾಗೂ ರಾಜಕೀಯದಲ್ಲಿ ಬೆಳೆಯಲು ಸದ್ಗುರುಜೀ ಅವರೇ ಮೂಲ ಕಾರಣ.. ಸದ್ಗುರು ಗಳ ಅಪಾರ ಶಕ್ತಿ ಹೊಂದಿದ್ದಾರೆ. ಅವರನ್ನು ಪಡೆದ ನಾವುಗಳು ಪುಣ್ಯವಂತರು.

ಅವರ ಆಶೀರ್ವಾದ ಸದಾ ನಮ್ಮ ನಿಮ್ಮೆಲ್ಲರ ಮೇಲೆ ಇರಲಿ ಎಂದು ಅಭಿಮತ ವ್ಯಕ್ತ ಪಡಿಸಿದರು.

ಡಾ. ವಿಶ್ವನಾಥ ತೇಗಂಪುರೆ ಮಾತನಾಡಿ. ನಮ್ಮ ಭಾಗದಲ್ಲಿ ನಡೆದಾಡುವ ದೇವರೆಂದರೆ ರಾಷ್ಟ್ರ ಸಂತ ಡಾ ಸದ್ಗುರು ಜಿಯವರು ಮಾತ್ರ. ಧರೆಗೆ ನಮ್ಮ ನಿಮ್ಮ ಸಂಕಷ್ಟಗಳು ದೂರ ಮಾಡಲು ಬಂದಿರುವ ಅಪ್ಪಟ ಪರಂ ಪೂಜ್ಯರು. ಹೀಗಾಗಿ ತಾವುಗಳು ನಿತ್ಯ ಪರಂ ಪೂಜ್ಯರ ಪರಮಾತ್ಮನ ನಾಮಸ್ಮರಣೆ ಮಾಡುತ್ತ ಭಕ್ತಿಯಿಂದ ಭಜಿಸಬೇಕು ಅಂದಾಗ ಮಾತ್ರ ಗುರುಗಳ ಆಶೀರ್ವಾದ ದೊರೆಯುತ್ತದೆ ಎಂದರು.

ಭಾರತೀಯ ಪರಂಪರೆಯನ್ನು ಭಾರತೀಯ ಸಂಸ್ಕೃತಿ ಸಂಪ್ರದಾಯವನ್ನು ಮುಂದಿನ ಪೀಳಿಗೆಗೆ ಧಾರೆ ಎರೆಯಬೇಕು. ಎಲ್ಲಾ ತಂದೆ ತಾಯಿಗಳು ಮಕ್ಕಳಿಗೆ ಸಂಸ್ಕಾರ ನೀಡುವುದನ್ನು ಮರೆಯಬಾರದು ಎಂದು ವಿಶ್ವನಾಥ ತೇಗಂಪುರೆ ನುಡಿದರು..

ಬ್ಯಾಂಕರಡ್ಡಿ ಮಾತನಾಡಿ ರೆಡ್ಡಿ ಸಮಾಜಕ್ಕೆ ನಮ್ಮ ಕೊಡುಗೆ ನೀಡಬೇಕು.

ಕೇಂದ್ರ ಬಿಂದುವಾದ ರೇಕುಳಗಿ ಯ ಶ್ರೀ ರಾಷ್ಟ್ರ ಸಂತ ಪರಂ ಪೂಜ್ಯ ಎನ್ ಬಿ ಸದ್ಗುರು ಜೀಯವರು ಸಮಾರಂಭದಲ್ಲಿ ಆಗಮಿಸಿದ ಭಕ್ತರಿಗೆ ಆಶೀರ್ವಾದ ಮಾಡಿದರು.

ವೇದಿಕೆಯ ಮೇಲೆ ಜಗನಾಥ ಸಿದ್ಧಾ. ರವಿರೆಡ್ಡಿ. ರವಿ ನಾಗಿನಕೇರೆ. ದೀಪಕ ಸಲಗರ. ಪ್ರದೀಪಕುಮಾರ. ಪತ್ರಕರ್ತ ಧರ್ಮೇಂದ್ರ ಪೂಜಾರಿ ಬಗ್ದೂರಿ. ಸೂರ್ಯಕಾಂತ ಯಾಕತಪುರೆ ಮಲ್ಲಿಕಾರ್ಜುನ ಪಾಟೀಲ ಜಹಿರಾಬಾದ. ಹಾಗೂ ಮಹಾರಾಷ್ಟ್ರ. ತೆಲಂಗಾಣದಿಂದ ಇನ್ನಿತರರ ಭಕ್ತರು ಪಾಲ್ಗೊಂಡಿದರು. ವಿಶ್ವನಾಥ ತೇಗಂಪುರೆ ನಿರೂಪಣೆ ಮಾಡಿದರು. ಸದ್ಗುರುಜಿಯವರಿಗೆ ಆದರದ ಸ್ವಾಗತ ಕೋರಿದರು. ಜಾನಪದ. ಡೊಳ್ಳು ಕುಣಿತ ಭಕ್ತರನ್ನು ಹುರಿದುಂಬಿಸಿದವು.

# ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಕೋರ್ಸುಗಳ ಪ್ರವೇಶ ಆರಂಭ

**ಬೆಳಗಾವಿ ::** 2024–25ನೇ ಸಾಲಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಮೈಸೂರು ವತಿಯಿಂದ ಮೂರು ವರ್ಷಗಳ ಅವಧಿಯ ಡಿಪ್ಲೋಮಾ ಕೋರ್ಸುಗಳ ಪ್ರವೇಶಕ್ಕೆ (ಅಖಿಲ ಭಾರತ ಮಟ್ಟದಲ್ಲಿ) ವಿಶೇಷಚೇತನ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸದರಿ ಆರ್ಕಿಟೆಕ್ಚರ್ ಅಸಿಸ್ಟೆಂಟ್‌ಷಿಪ್, ಕಮರ್ಷಿಯಲ್ ಪ್ರಾಕ್ಟೀಸ್, ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ಅನುದಾನಿತ ಕೋರ್ಸುಗಳು ಹಾಗೂ ಜ್ಯುಯಲರಿ ಡಿಸೈನ್ ಮತ್ತು ಟೆಕ್ನಾಲಜಿ, ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್, ಕಂಪ್ಯೂಟರ್ ಅಪ್ಲಿಕೇಷನ್ಸ ( ಫಾರ್ ವಿಜ್ಯುವಲಿ ಇಂಪೆರ್ಡ್), ಅಪಾರೇಲ್ ಡಿಸೈನ್ ಮತ್ತು ಪ್ಯಾಬ್ರಿಕೇಷನ್ ಟೆಕ್ನಾಲಜಿ ಅನುದಾನ ರಹಿತ ಕೋರ್ಸುಗಳು ಲಭ್ಯವಿರುತ್ತವೆ. ಆಸಕ್ತರು ಜೂ. 15 ಒಳಗಾಗಿ ಅರ್ಜಿಗಳನ್ನು ಕಛೇರಿಗೆ ಸಲ್ಲಿಸಬಹುದು. ಸದರಿ ಮೂಳೆ ಮತ್ತು ಕೀಲು ಅಂಗವಿಕಲತೆ 40%, ಕಿವಿಡು ಮತ್ತು ಮೂಗು ಅಂಗವಿಕಲತೆ 60% ಡಿಬಿ, ಭಾಗಶಃ ಮತ್ತು ಪೂರ್ಣ ಅಂಧತ್ವ 6/60 ಅಥವಾ 20/200 ಸ್ನೆಲೆನ್ ಮೇಲ್ಪಟ್ಟ ವಿದ್ಯಾರ್ಥಿಗಳು ಮಾತ್ರ ಈ ಕೋರ್ಸುಗಳಿಗೆ ಅರ್ಹರಾಗಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ www.jsspda.org ವೆಬ್ ಸೈಟ್ ಅನ್ನು ಇ–ಮೇಲ್ ಮೂಲಕ ಅಥವಾ ದೂ: 9844644937 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಾಸಕ ರಾಜು ಕಾಗೆ ಎದುರಲ್ಲೇ ಮಾಧ್ಯಮದವರ ಕೈಕಾಲು ಮುರಿಯುವ ಬೆದರಿಕೆ:

# ಶಿಸ್ತುಕ್ರಮಕ್ಕೆ ಆಗ್ರಹಿಸಿ ಪತ್ರಕರ್ತರಿಂದ ಮನವಿ

**ಅಥಣಿ :** ಕಾಗವಾಡ ಶಾಸಕ ರಾಜು ಕಾಗೆ ಅವರ ಎದುರಿಗೆ ಮಾಧ್ಯಮದ ಪ್ರತಿನಿಧಿಗಳನ್ನು ಮನೆ ಹೊಕ್ಕು ಹೊಡೆಯುತ್ತೇನೆಂದು ಬೆದರಿಕೆ ಹಾಕಿರುವ ಕಾಂಗ್ರೆಸ್ ಕಾರ್ಯಕರ್ತನ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಅಥಣಿ ಹಾಗೂ ಕಾಗವಾಡ ತಾಲೂಕಾ ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳು ಆಗ್ರಹಿಸಿದ್ದಾರೆ.



ಮಂಗಳವಾರ ಅಥಣಿ ಮತ್ತು ಕಾಗವಾಡ ತಾಲೂಕಾ ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳು ಕಾಗವಾಡ ತಹಶೀಲ್ದಾರ ಎಸ್. ಬಿ ಇಂಗಳೆ, ಕಾಗವಾಡ ಪಿಎಸ್‌ಐ ಎಂ. ಬಿ ಬಿರಾದರ ಮತ್ತು ಅಥಣಿ ಪಿ.ಎಸ್.ಐ ಹೆಚ್ಚುವರಿ ಪಿಎಸಐ ಚಂದ್ರಶೇಖರ ಸಾಗನೂರ ಇವರಿಗೆ ಮನವಿ ಸಲ್ಲಿಸಿ ಆತನ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಈ ಸಮಯದಲ್ಲಿ ಹಿರಿಯ ಪತ್ರಕರ್ತರಾದ ಸುಕುಮಾರ ಬನ್ನೂರೆ, ಅಣ್ಣಾಸಾಹೇಬ ತೆಲಸಂಗ ಮತ್ತು ಸಿದ್ಧಯ್ಯ ಹಿರೇಮಠ ಮಾತನಾಡಿ, ಪತ್ರಕರ್ತರು ಕಠಿಣ ಪರಿಸ್ಥಿಯಲ್ಲಿ ತಮ್ಮ ಕರ್ತವ್ಯ ನಿರ್ವಹಸುತ್ತಿದ್ದು, ನೈಜ ಸುದ್ದಿಗಳನ್ನು ಜನರಿಗೆ ಮುಟ್ಟಿಸುವ ಕೆಲಸ ಮಾಡುತ್ತಾರೆ. ಅಂತಹ ಪರ್ತಕರ್ತರಿಗೆ ಈಗ ರಕ್ಷಣೆ ಇಲ್ಲದಂತಾಗಿದೆ. ನಿನ್ನೆ ಅಥಣಿ ತಾಲೂಕಿನ ಬೆವನೂರು ಗ್ರಾಮದ ಜಾತ್ರೆಯಲ್ಲಿ ಮೋಳೆ ಗ್ರಾಮದ ಕಾಂಗ್ರೆಸ್ ಕಾರ್ಯಕರ್ತ ಸಂತೋಷ ಚುರಮೂಲೆ ಇತನು ಶಾಸಕ ರಾಜು ಕಾಗೆ ಅವರು ಸಮ್ಮುಖದಲ್ಲಿಯೇ ಮಾಧ್ಯಮದವರನ್ನು ಮನೆ ಹೊಕ್ಕು ಕೈ–ಕಾಲು ಮುರಿಯುವುದಾಗಿ ಧಮ್ಕಿ ಹಾಕಿದ್ದಾನೆ. ಕೂಡಲೇ ಆತನನ್ನು ಬಂಧಿಸಿ, ಆತನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಈ ರೀತಿ ಸ್ಥಳೀಯ ಶಾಸಕರ ಸಮ್ಮುಖದಲ್ಲಿಯೇ ಘಟನೆ ನಡೆದಿದ್ದು, ಸಾರ್ವಜನಿಕ ವಲಯದಲ್ಲಿ ಶಾಸಕರ ವಿರುದ್ಧ ತೀವ್ರ ಆಕ್ಷೇಪ ವ್ಯಕ್ತವಾಗುತ್ತಿದ್ದಂತೆ ಎಚ್ಚತ್ತುಕೊಂಡ ಶಾಸಕರು ಮಾಧ್ಯಮದವರ ಕ್ಷೇಮೆ ಕೇಳಿದ್ದು, ಆತನಿಗೂ ಮತ್ತು ನನಗೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದು ಜಾರಿಕೊಂಡಿದ್ದಾರೆ.

ಈ ವೇಳೆ ಕಾರ್ಯನಿರತ ಪತ್ರಕರ್ತರ ಸಂಘದ ಚನ್ನಯ್ಯ ಇಟ್ನಾಳಮಠ, ಶಿವಕುಮಾರ್ ಅಪರಾಜ, ಪರಶುರಾಮ ನಂದೇಶ್ವರ, ವೆಂಕಟೇಶ ದೇಶಪಾಂಡೆ, ರಮೇಶ ಬಾದವಾಡಗಿ, ರಾಕೇಶ್ ಮೈಗೂರ. ಜಬ್ಬಾರ ಚಿಂಚಲಿ, ಸುರೇಶ ಕಾಗಲಿ, ಸಚೀನ ಕಾಂಬಳೆ, ಮಹಾಂತೇಶ ಅರಿಕೇರಿ, ವಿಜಯಕುಮಾರ ಅಡಹಳ್ಳಿ, ರಾಜು ಗಾಲಿ, ಸತೀಶ ಕೋಳಿ, ಬಸವರಾಜ ತಾರದಾಳೆ, ಸಂಜಯ ಕೌಲಗಿ, ಮುರಗೇಶ ಘಸ್ತಿ, ಅಮರ ಕಾಂಬಳೆ, ರಾಜು ಚೌಳಕೆ, ಯಾಶಿನ್ ಝಾರೆ, ಅಜೀತ ಕಾಂಬಳೆ ಉಪಸ್ಥಿತರಿದ್ದರು.

# ಗಂಗಾವತಿ: ಗುಡ್ಡಗಾಡಲ್ಲಿ ಬೀಜದುಂಡೆ ಹಾಕುತ್ತಿರುವ ಸಮಾನ ಮನಸ್ಕರ ತಂಡ



**ಗಂಗಾವತಿ :** ಐತಿಹಾಸಿಕ ಸ್ಮಾರಕ ಮತ್ತು ಪರಿಸರ ರಕ್ಷಣೆ, ಶಾಸನಗಳ ಪತ್ತೆ, ದೇವಸ್ಥಾನಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹ, ಅರಣ್ಯ ಪ್ರದೇಶದಲ್ಲಿನ ಪ್ರಾಣಿ ಸಂಕುಲಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ ಹಲವು ಸಮಾಜಮುಖಿ ಕಾರ್ಯಗಳಿಗೆ ಹೆಸರಾದ ಲೀವ್ ವಿಥ್ ಹ್ಯುಮಾನಿಟಿ ಟ್ರಸ್ಟ್, ಕಿಷ್ಕಿಂದ ಯುವ ಚಾರಣ ಬಳಗವು ಮಳೆಗಾಲದ ನಿಮಿತ್ತ ಮಲ್ಲಾಪುರ ಬಳಿಯ ವಾಣಿಭದ್ರೇಶ್ವರ ದೇವಸ್ಥಾನದ ಗುಡ್ಡಗಾಡು ಪ್ರದೇಶದಲ್ಲಿ ಸೀಡ್ ಬಾಲ್ (ಬೀಜದ ಉಂಡೆ) ಅಭಿಯಾನ ಆರಂಭಿಸಿದೆ.

ಲೀವ್ ವಿಥ್ ಹ್ಯುಮಾನಿಟಿ ಟ್ರಸ್ಟ್, ಕಿಷ್ಕಿಂದ ಯುವ ಚಾರಣ ಬಳಗದ ಸಮಾನ ಮನಸ್ಕರು ಸೇರಿ–ಕೊಂಡು ಈಗಾಗಲೇ ಅಂಜನಾದ್ರಿ ಬೆಟ್ಟ(2 ಬಾರಿ), ಪಂಪಾಸರೋವರಸ್ವಚ್ಛತೆ,ಆನೆಗೊಂದಿಭಾಗದಲ್ಲಿಸಸಿ ನೆಟ್ಟಿರುವುದು, ಮತದಾನ ಜಾಗೃತಿ ಕಾರ್ಯ, ಬೇಸಿಗೆ ಸಮಯದಲ್ಲಿ ನಗರ ಭಾಗದ ಬಿಡಾಡಿ ದನಗಳಿಗೆ ನೀರಿನತೊಟ್ಟಿಅಳವಡಿಕೆಸೇರಿಹಲವುಸಮಾಜಮುಖಿ ಕಾರ್ಯಗಳು ಮಾಡಿ ಮಾದರಿಯಾಗಿದ್ದಾರೆ.

ಇದೀಗ ಮಳೆಗಾಲ ಆರಂಭವಾಗಲಿದ್ದು, 10ಕ್ಕೂ ಹೆಚ್ಚು ಜನರನ್ನು ಒಳಗೊಂಡ ತಂಡ ಇದೇ ಭಾನುವಾರ 2 ಸಾವಿರ ಬೀಜದ ಉಂಡೆಗಳನ್ನು ವಾಣಿಭದ್ರೇಶ್ವರ ದೇವಸ್ಥಾನ ಸಮೀಪದ ಗುಡ್ಡಗಾಡು ಪ್ರದೇಶದಲ್ಲಿ ಮಳೆಗೆ ಹದಗೊಂಡ ಭೂಮಿಯಲ್ಲಿ ಹಾರಿ, ಕಬ್ಬಿಣದ ರಾಡ್‌ಗಳಿಂದ ಚಿಕ್ಕ ಚಿಕ್ಕ ಗುಂಡಿಗಳನ್ನು ತೋಡಿ ಹಾಕಿ ಮುಚ್ಚಿದೆ. ಈ ಮೂಲಕ ಪರಿಸರ ಬೆಳವಣಿಗೆಗೆ ಶ್ರಮಿಸುತ್ತಿದೆ.

ಯಾವ ಬೀಜಗಳು?: ಪ್ರಸಕ್ತ ಸಾಲಿನಲ್ಲಿ ಬಿಸಿಲಿನ ತಾಪಮಾನ ಹೆಚ್ಚಳವಾಗಿ, ನೆರಳು ಮತ್ತು ನೀರಿಗಾಗಿ ಜನರು, ಪ್ರಾಣಿ ಸಂಕುಲ ತತ್ತರಿಸಿ ಹೋಗಿದ್ದು, ಪ್ರಕೃತಿ ವೈಪರೀತ್ಯ ತಡೆಯಲು ಈ ಸೀಡ್‌ಬಾಲ್ ಅಭಿಯಾನ ಆರಂಭಿಸಲಾಗಿದೆ. ಇದರ ಭಾಗವಾಗಿ ಗುಡ್ಡಗಾಡು ಪ್ರದೇಶದಲ್ಲಿ ಹುಣಸೆ, ಸಿರಿಸ್, ಪೀಕಾಕ್ ಫ್ಲವರ್ (ಗುಲ್ ಮೋಹರ್), ಮಲ್ನಾಡ್ ಹುಣಸೆ, ಹೊಂಗೆ, ಬೇವಿನ ತಳಿಯ 2 ಸಾವಿರ ಬೀಜದ ಉಂಡೆಗಳನ್ನು ಹಾಕಲಾಗಿದೆ.

ದಟ್ಟಕಾಡು ನಿರ್ಮಾಣ ಗುರಿ: ಹಲವು ಸಮಾಜಮುಖಿ ಕಾರ್ಯಗಳಿಗೆ ಹೆಸರಾದ ಲೀವ್ ವಿಥ್ ಹ್ಯುಮಾನಿಟಿ ಟ್ರಸ್ಟ್ ಮತ್ತು ಕಿಷ್ಕಿಂದ ಯುವ ಚಾರಣ ಬಳಗ ತಾಲ್ಲೂಕಿನ 2 ಎಕರೆ ಪ್ರದೇಶದಲ್ಲಿ ಮಿಯಾವಾಕಿ ಮಾದರಿಯಲ್ಲಿ ದಟ್ಟಕಾಡು ನಿರ್ಮಿಸುವ ಮಹತ್ತರ ಗುರಿ ಹೊಂದಿದೆ.

ಜತೆಗೆ ಸರ್ಕಾರಿ ಶಾಲೆ? ಕಾಲೇಜುಗಳ ಮೈದಾನದಲ್ಲಿ ಸಸಿಗಳನ್ನು ನೆಟ್ಟು, ಅವುಗಳ ನಿರ್ವಹಣೆ ಮುಖ್ಯಶಿಕ್ಷಕರಿಗೆ, ಪ್ರಾಚಾರ್ಯರಿಗೆ ಒದಗಿಸುತ್ತಿದೆ.

ಐತಿಹಾಸಿಕ ಸ್ಮಾರಕಗಳ ರಕ್ಷಣೆ, ಪರಿಸರ ಉಳಿವಿಗೆ ಶ್ರಮಿಸುತ್ತಿರುವ ಎರಡು ತಂಡಗಳ ಸದಸ್ಯರು ಪ್ರತಿ ಭಾನುವಾರ ಗಂಗಾವತಿ ತಾಲ್ಲೂಕಿನ ಐತಿಹಾಸಿಕ ತಾಣಗಳಿಗೆ ಚಾರಣ ಬೆಳೆಸಿ ತಾಣಗಳ ಪರಿಚಯಿಸುವ ಜತೆಗೆ ಸೀಡ್‌ಬಾಲ್‌ಗಳನ್ನು ತಯಾರಿಸಿ, ಗುಡ್ಡಗಾಡು ಪ್ರದೇಶದಲ್ಲಿ ಹಾಕುತ್ತಿದ್ದಾರೆ.

# ಸಾಮಾಜಿಕ ನ್ಯಾಯದಡಿ ಸುಣಗಾರ ಅವರಿಗೆ ಮೇಲ್ಮನೆಗೆ ಆಯ್ಕೆ ಮಾಡಿ

**ತಾಳಿಕೋಟೆ :** ವಿಧಾನ ಸಭಾ ಭಲದ ಆಧಾರದ ಮೇಲೆ ವಿಧಾನ ಪರಿಷತ್‌ಗೆ ನಡೆಯುತ್ತಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಸಾಮಾಜಿಕ ನ್ಯಾಯದಡಿ ಮತ್ತು ಹಿಂದೂಳಿದ ಕೋಟಾದಡಿ ಮಾಜಿ ಶಾಸಕ ಶರಣಪ್ಪ ಸುಣಗಾರ ಅವರಿಗೆ ಗುರುತಿಸಿ ಟಿಕೆಟ್ ನೀಡಿ ಆಯ್ಕೆ ಮಾಡಬೇಕೆಂದು ಪುರಸಭಾ ಸದಸ್ಯ ಕಾಂಗ್ರೆಸ್ ಮುಖಂಡ ಪರಶುರಾಮ ತಂಗಡಗಿ ಅವರು ಒತ್ತಾಯಿಸಿದರು.



ಮಂಗಳವಾರರಂದು ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಹಿಂದೂಳಿದ ಸಮಾಜಗಳ ವತಿಯಿಂದ ಕರೆಯಲಾದ ಪತ್ರಿಕಾ ಘೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು ಮಾಜಿ ಶಾಸಕ ಶರಣಪ್ಪ ಸುಣಗಾರ ಅವರು ಕಳೆದ 40 ವರ್ಷಗಳಿಂದಲೂ ಕಾಂಗ್ರೆಸ್ ಪಕ್ಷದ ಸಂಘಟನಾತ್ಮಕ ಕೆಲಸ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡಂತಹ ವ್ಯಕ್ತಿಯಾಗಿದ್ದಾರೆ ಜಿಲ್ಲೆಯ ಎಲ್ಲ ವಿಧಾನ ಸಭಾ ಕ್ಷೇತ್ರಗಳಲ್ಲಿ ಕಾರ್ಯಕರ್ತರೊಂದಿಗೆ ಬೆರೆತುಕೊಳ್ಳುವಂತಹ ವ್ಯಕ್ತಿಯಾಗಿದ್ದಾರೆ ಈ ಹಿಂದೆ ಸಿಂಧಗಿ ಮತಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ ಅವರಿಗೆ ರಾಜಕೀಯ ಸಾಕಷ್ಟು ಅನುಭವವೂ ಕೂಡಾ ಇದ್ದು ಹಿಂದೂಳಿದ ವರ್ಗಗಳ ಕೋಟಾದಡಿ ಪಕ್ಷದಲ್ಲಿ ಯಾವುದೇ ಸ್ಥಾನಮಾನವೂ ಕೂಡಾ ಸಿಕ್ಕಿಲ್ಲಾ ಹೀಗಾಗಿ ಸುಣಗಾರ ಅವರನ್ನು ಮೇಲ್ಮನೆ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಟಿಕೇಟ್ ನೀಡುವದರೊಂದಿಗೆ ಆಯ್ಕೆಗೊಳಿಸಬೇಕೆಂದು ಎಲ್ಲ ಸಮಾಜಗಳ ಪರವಾಗಿ ಕಾಂಗ್ರೆಸ್ ಪಕ್ಷದ ವರಿಷ್ಠಲ್ಲಿ ಒತ್ತಾಯಿಸುತ್ತೇವೆಂದ ಅವರು ಮಾಜಿ ಶಾಸಕ ಶರಣಪ್ಪ ಸುಣಗಾರ ಅವರು ಮಲ್ಲಿಕಾರ್ಜುನ ಖರ್ಗೆ ಅವರ ಗರಡಿಯಲ್ಲಿ ಫಳಗಿದವರಾಗಿದ್ದಾರೆ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹಾಗೂ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ ಅವರ ಆಪ್ತರಲ್ಲಿಯೂ ಕೂಡಾ ಒಬ್ಬರಾಗಿದ್ದು ಇವರನ್ನು ವಿಧಾನ ಪರಿಷತ್ತಿಗೆ ಆಯ್ಕೆ ಮಾಡುವದರಿಂದ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಇನ್ನಷ್ಟು ಭಲ ತುಂಬಲಿದೆ ಅಲ್ಲದೇ ಕಾರ್ಯಕರ್ತರಲ್ಲಿ ಇನ್ನಷ್ಟು ಹುರುಪು ಮೂಡಲಿದೆ ಎಂದರು.

ಇನ್ನೋರ್ವ ಅಂಬಿಗೇರ ಸಮಾಜದ ನಗರ ಘಟಕದ ಅಧ್ಯಕ್ಷ ರಮೇಶ ಮೂಕೀಹಾಳ ಅವರು ಮಾತನಾಡಿ ಮಾಜಿ ಶಾಸಕ ಸುಣಗಾರ ಅವರು ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ಮುತ್ಸದ್ದಿಗಳಲ್ಲಿ ಒಬ್ಬರಾಗಿದ್ದಾರೆ ಮತ್ತು ಕಾರ್ಯಕರ್ತರ ಸಮಸ್ಯೆಗಳಿಗೆ ಸ್ಪಂದಿಸುವಂತಹ ಮನೋಭಾವನೆ ಹೊಂದಿದಂತಹ ವ್ಯಕ್ತಿಯಾಗಿದ್ದಾರೆ ಕಾಂಗ್ರೆಸ್ ಪಕ್ಷವನ್ನು ಜಿಲ್ಲೆಯಲ್ಲಿ ಕಟ್ಟಿ ಬೆಳೆಸುವಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತಾ ಬಂದವರಾಗಿದ್ದಾರೆ ಇಂತಹ ಪಕ್ಷ ನಿಷ್ಠ ವ್ಯಕ್ತಿ ಸುಣಗಾರ ಅವರಿಗೆ ವಿಧಾನ ಪರಿಷತ್ ಚುನಾವಣೆಯಲ್ಲಿ ಗುರುತಿಸಿ ಟಿಕೆಟ್ ನೀಡಿ ಆಯ್ಕೆಗೊಳಿಸಿದಲ್ಲಿ ಜಿಲ್ಲೆಯಲ್ಲಿ ಪಕ್ಷವು ಇನ್ನಷ್ಟು ಭಲಿಷ್ಠಗೊಳ್ಳುವದರಲ್ಲಿ ಯಾವದೇ ಸಂಶಯವಿಲ್ಲಾವೆಂದರು.

ಇನ್ನೋರ್ವ ಮುಖಂಡ ಶಾಂತು ಹೊಸಕೇರಿ, ಮತ್ತು ವಿಶ್ವನಾಥ ತಳವಾರ(ಅಸ್ಕಿ) ಅವರು ಮಾತನಾಡಿ ಮಾಜಿ ಶಾಸಕ ಶರಣಪ್ಪ ಸುಣಗಾರ ಅವರು ಕಾಂಗ್ರೆಸ್ ಪಕ್ಷದ ಏಳಿಗೆಗಾಗಿ ದುಡಿದಂತಹ ವ್ಯಕ್ತಿಯಾಗಿದ್ದಾರೆ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ದೇವರ ಹಿಪ್ಪರಗಿ ಮತಕ್ಷೇತ್ರಕ್ಕೆ ಅಲ್ಪದಿನಗಳಲ್ಲಿಯೇ ಟಿಕೆಟ್ ಘೋಷಣೆ ಮಾಡಿದ್ದರಿಂದ ಕ್ಷೇತ್ರದ ಎಲ್ಲ ಗ್ರಾಮಗಳಿಗೆ ಪ್ರಚಾರಕ್ಕೆ ತೆರಳಲು ಆಗಲಿಲ್ಲಾ ಹೀಗಾಗಿ ಸೋಲನ್ನು ಅನುಭವಿಸಬೇಕಾಯಿತು ಸಾಮಾಜಿಕ ಮಾನದಂಡದಡಿ ಶರಣಪ್ಪ ಸುಣಗಾರ ಅವರಿಗೆ ವಿಧಾನ ಪರಿಷತ್‌ಗೆ ಆಯ್ಕೆಗೊಳಿಸುವ ಕಾರ್ಯ ಕಾಂಗ್ರೆಸ್ ಪಕ್ಷದ ಹೈಕಮಾಂಡ ಮಾಡಬೇಕೆಂದು ಒತ್ತಾಯಿಸಿದರು.

ಇನ್ನೋರ್ವ ಮುಖಂಡ ತೋಟಪ್ಪ ಏವೂರ ಅವರು ಶರಣಪ್ಪ ಸುಣಗಾರ ಅವರಿಗೆ ವಿಧಾನ ಪರಿಷತ್‌ಗೆ ಆಯ್ಕೆಗೊಳಿಸುವದರೊಂದಿಗೆ ಪರಿಷತ್ತಿನಲ್ಲಿ ಹೆಚ್ಚಿನ ಶಕ್ತಿ ಬರಲಿದೆ ಪಕ್ಷಕ್ಕಾಗಿ ದುಡಿದಂತಹ ಕಾರ್ಯಕರ್ತರಿಗೆ ಮಾನ್ಯತೆ ನೀಡಿದಂತಾಗಲಿದೆ ಎಂದರು.

ಈ ಸಮಯದಲ್ಲಿ ಮುಖಂಡರುಗಳಾದ ದೇವೇಂದ್ರ ಪೂಜಾರಿ(ಗೊಟಗುಣಕಿ), ಮಾನಪ್ಪ ನಾಯ್ಕೋಡಿ, ಕಾಶಿನಾಥ ಮದರಿ, ಈರಪ್ಪ ನಾಯ್ಕೋಡಿ, ಮಡಿವಾಳಪ್ಪ ಚಿಗರಿ, ಮಲ್ಲಿಕಾರ್ಜುನ ಮದರಿ, ಮಲ್ಲಿಕಾರ್ಜುನ ನೆಲ್ಲಗಿ, ಭೀಮಣ್ಣ ತಳವಾರ, ಸಂಗಮೇಶ ಮದರಿ, ಗೋಪಾಲ ಸುರಪೂರ, ಶಾಂತಪ್ಪ ಇಣಚಗಲ್ಲ, ಜಾಜನಗೌಡ ಬಿರಾದಾರ, ಸಂಗಮೇಶ ಅಂಬಿಗೇರ (ಕಲ್ಲದೇವನಹಳ್ಳಿ), ಸಂಗಮೇಶ ಅಂಬಿಗೇರ(ವನಹಳ್ಳಿ), ದಂಡಪ್ಪ ಬಡಿಗೇರ, ಬಸವರಾಜ ತಳವಾರ, ಮಲ್ಲೇಶ ತಳವಾರ, ಸಚೀನ ತಳವಾರ, ಬಸವರಾಜ ಗುಡ್ಡಕಾಯಿ, ಮುತ್ತು ತಳವಾರ, ಸಿದ್ದು ವಾಲಿಕಾರ, ರಮೇಶ ಯಕ್ತಾಪೂರ, ರಾಜು ವಾಲಿಕಾರ, ಹನೀಪ ನೀರಲಗಿ, ಹರಿಸಿಂಗ್ ಪರಶುರಾಮ ಕೊಕಟನೂರ, ಮೊದಲಾದವರು ಇದ್ದರು.

# ತಳಕಲ್ ಐಟಿಐ ಸಂಸ್ಥೆ: ಆನ್‌ಲೈನ್ ಅರ್ಜಿ ಆಹ್ವಾನ

**ಕೊಪ್ಪಳ :** ತಳಕಲ್‌ನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2024–25ನೇ ಸಾಲಿನಲ್ಲಿ ಬಹು ಬೇಡಿಕೆ ಇರುವ ವಿವಿಧ ವೃತ್ತಿಗಳಲ್ಲಿ ಸೀಟುಗಳು ಲಭ್ಯವಿದ್ದು, ಆಸಕ್ತರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಸಂಸ್ಥೆಯಲ್ಲಿ ವಿದ್ಯುತ್‌ಶಿಲ್ಪಿ, ವಿದ್ಯುನ್ಮಾನದುರಸ್ಥಿಗಾರ,ಜೋಡಣೆಗಾರ,ಉದ್ಯೋಗ ಯೋಜನೆ ಅಡಿಯಲ್ಲಿ ಅಡ್ವಾನ್ಸ್ ಸಿಎನ್‌ಸಿ ಮಷಿನಿಂಗ್ ಸೀಟುಗಳು ಹಾಗೂ ಪಿಪಿಪಿ ಅಡಿಯಲ್ಲಿ ಪ್ರತಿಯೊಂದು ವೃತ್ತಿಯಲ್ಲಿ04ಸೀಟುಗಳುಲಭ್ಯವಿವೆ.ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಹಾಗೂ ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಸಹ ಪ್ರವೇಶ ಪಡೆಯಬಹುದಾಗಿದೆ. ಆಸಕ್ತರು ಜೂನ್ 03 ರೊಳಗೆ ಸಂಸ್ಥೆಗೆ ಭೇಟಿ ನೀಡಿ ಅರ್ಜಿ ಸಲ್ಲಿಸಿ, ತಮ್ಮ ಎಲ್ಲ ಮೂಲ ದಾಖಲೆಗಳನ್ನು ಪರಿಶೀಲಿಸಿಕೊಂಡು ಪ್ರವೇಶ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ : 7975676394, 9902840748, 9902852362, 9538991007, 9741744109, 8217063363, 8147811887, 8951596076 ಗೆ ಸಂಪರ್ಕಿಸಬಹುದು ಎಂದು ಸಂಸ್ಥೆಯಪ್ರಾಚಾರ್ಯರುಪ್ರಕಟಣೆಯಲ್ಲಿತಿಳಿಸಿದ್ದಾರೆ.

# ತಪ್ಪಿತಸ್ಥರ ಮೇಲೆ ಸೂಕ್ತ ಕಾನೂನು ಕ್ರಮ ನಿಶ್ಚಿತ: ಶಶಿಧರ ಕೋಸಂಬೆ

## ಭ್ರೂಣಹತ್ಯೆ ಪ್ರಕರಣ: ಆರೋಪಿ ಕವಿತಾ ಮನೆಗೆ ರಾಜ್ಯಮಕ್ಕಳ ರಕ್ಷಣಾ ಆಯೋಗದ ಸದಸ್ಯರ ಭೇಟಿ





**ಮಹಾಲಿಂಗಪುರ :** ನಕಲಿ ವೈದ್ಯಳಿಂದ ಮನೆಯಲ್ಲಿಯೇ ಭ್ರೂಣಹತ್ಯೆ(ಗರ್ಭಪಾತ) ಮಾಡುತ್ತಿದ್ದ ಪಟ್ಟಣದ ಜಯಲಕ್ಷ್ಮೀನಗರದ ಕವಿತಾ ಬಾಡನವರ ಮನೆಗೆ ಶುಕ್ರವಾರ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಅವರು ಭೇಟಿ ನೀಡಿ ಭ್ರೂಣಹತ್ಯೆ ನಡೆಸುತ್ತಿದ್ದ ಜಾಗೆ ಹಾಗೂ ಅದಕ್ಕೆ ಬಳಸುತ್ತಿದ್ದ ವೈದ್ಯಕೀಯ ಪರಿಕರಗಳನ್ನು ಪರಿಶೀಲಿಸಿದರು.

ಪರಿಶೀಲಿಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು ಆರೋಪಿತ ಮಹಿಳೆಯ ಮನೆಯ ಮೇಲೆ ಟಿಎಚ್‌ಓ ಅವರು 2019 ಮತ್ತು 2022ರಲ್ಲಿ ಎರಡು ಬಾರಿ ಮನೆಯ ಮೇಲೆ ದಾಳಿಮಾಡಿ, ಮುಖ್ಯದ್ವಾರಕ್ಕೆ ಶೀಲ್ ಮಾಡಿದ್ದಾರೆ. ಅವಳಿಂದ 500 ಬಾಂಡ್‌ನಲ್ಲಿ ಇನ್ನು ಮುಂದೆ ಇಂತಹ ಕೆಲಸ ಮಾಡುವದಿಲ್ಲ ಎಂದು ಬಾಂಡ್ ಬರೆಸಿಕೊಂಡಿದ್ದಾರೆ. ನಂತರ ಅವಳ ಮೇಲೆ ಕೇಸ್ ಹಾಕಿ ಕೋರ್ಟನಲ್ಲಿ ಕೇಸ್ ನಡೆಯುತ್ತಿದ್ದರು ಸಹ, ಹಿತ್ತಲ ಬಾಗಿಲು ಮೂಲಕ ಎಗ್ಗಿಲ್ಲದೇ ಅಕ್ರಮವಾಗಿ ಭ್ರೂಣಹತ್ಯೆ ಮಾಡುತ್ತಿದ್ದರು. ಕಳೆದ ಸೋಮವಾರ ಮಹಾರಾಷ್ಟ್ರ ಮೂಲಕ ಸೋನಾಲಿ ಸಚಿನ್ ಕದಂ(33) ಗರ್ಭಪಾತ ಮಾಡಿಸಿಕೊಂಡು ಮೃತಳಾದ ಕಾರಣ ನೆರೆಯ ಮಹಾರಾಷ್ಟ್ರ ರಾಜ್ಯದ ಸಾಂಗಲಿ ಠಾಣೆಯಲ್ಲಿ ಪ್ರಕರಣ ದಾಖಲಾಗಿ, ಕೇಸ್ ಬಾಗಲಕೋಟೆಗೆ ವರ್ಗಾವಣೆಯಾದ್ದರಿಂದ ಭ್ರೂಣಹತ್ಯೆ ಪ್ರಕರಣವು ಬೆಳಕಿಗೆ ಬಂದಿದೆ.

ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳು ಹಿಂದಿನ ಎರಡು ದಾಳಿಯ ಸಂದರ್ಭದಲ್ಲಿಯೇ ಸೂಕ್ತ ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರೆ ಎಷ್ಟು ಜೀವಗಳು ಉಳಿಯುತ್ತಿದ್ದವು. ಇಂದು ಈ ಪ್ರಕರಣ ನಡೆದು ನೆರೆಯ ಮಹಾರಾಷ್ಟ್ರದಲ್ಲಿ ನಮ್ಮ ರಾಜ್ಯದ ಮರ್ಯಾದೆ ಹೋಗುತ್ತಿರಲಿಲ್ಲ. ಭ್ರೂಣಹತ್ಯೆ ಪ್ರಕರಣದಿಂದ ಮಹಾರಾಷ್ಟ್ರ ರಾಜ್ಯದವರು ಇಂದು ಕರ್ನಾಟಕದಲ್ಲಿ ಎಲ್ಲವೂ ನಡೆಯುತ್ತದೆ ಎಂದು ಮಾತನಾಡಿಕೊಳ್ಳುವಂತಾಗಿದೆ. ಇದಕ್ಕೆ ಜಿಲ್ಲಾ ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣವಾಗಿದೆ ಎಂದರು.

**ಬಸವನಾಡಿನಲ್ಲಿ ಈ ಘಟನೆ ನಡೆಯಬಾರದಿತ್ತು :**

ಭಾರತ ದೇಶದಲ್ಲಿ ಲಿಂಗಾನುಪಾತ ಕುಸಿಯುತ್ತಿರುವ ಸಂದರ್ಭದಲ್ಲಿ ಹಾಗೂ ಸ್ತ್ರೀ ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ 12ನೇ ಶತಮಾನದಲ್ಲಿ ಹೋರಾಟ ಮಾಡಿದ್ದ ವಿಶ್ವಗುರು ಬಸವಣ್ಣನವರು ಜನ್ಮ ತಳೆದ ನಾಡಿನಲ್ಲಿ ಹೆಣ್ಣುಭ್ರೂಣ ಹತ್ಯೆಯ ಅಕ್ರಮ ದಂಧೆಯು ಕಳೆದ 7–8 ವರ್ಷಗಳಿಂದ ಎಗ್ಗಿಲ್ಲದೆ ಮಹಾಲಿಂಗಪುರದಲ್ಲಿ ನಡೆಯುತ್ತಿದೆ ಎಂದರೆ ಇದು ನಮ್ಮ ನಾಗರೀಕ ಸಮಾಜ ತಲೆ ತಗ್ಗಿಸುವ ಮತ್ತು ಬಸವಣ್ಣನವರಿಗೆ ಮಾಡಿದ ಅವಮಾನವಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

**ಆಯೋಗದಿಂದಲೂ ಕೇಸ್ ದಾಖಲು :**

ಭ್ರೂಣಹತ್ಯೆ ಪ್ರಕರಣವು ಅಂತರಾಜ್ಯಕ್ಕೆ ವ್ಯಾಪಿಸಿದ್ದರಿಂದ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಸದರಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಸುಮೋಟೋ ಪ್ರಕರಣ ದಾಖಲಿಸಿಕೊಂಡಿದೆ. ಇಂದು ಸ್ವತಃ ನಾವು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದೇವೆ. ಜಿಲ್ಲಾಧಿಕಾರಿಗಳು, ಎಸ್‌ಪಿ ಅವರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದು ಮೂರು ದಿನಗಳಲ್ಲಿ ಕೇಸ್‌ನ ಸಂಪೂರ್ಣ ವರದಿಯನ್ನು ತರಿಸಿಕೊಂಡು ನಮ್ಮ ಆಯೋಗದಿಂದಲೂ ಕೇಸ್ ದಾಖಲಿಸಿ ಆರೋಪಿತರಿಗೆ ಕಠಿಣ ಶಿಕ್ಷೆ ಕೊಡಿಸಲು ಪ್ರಯತ್ನಿಸುತ್ತೇವೆ.

**ಪ್ರಭಾವಿಗಳ ಆಟ ನಡೆಯಲು ಬಿಡಲ್ಲ :**

ಭ್ರೂಣಹತ್ಯೆ ಪ್ರಕರಣದಲ್ಲಿ ಜಿಲ್ಲೆಯ ಕೆಲವು ಪ್ರಭಾವಿ ವ್ಯಕ್ತಿ ಹಾಗೂ ಅಧಿಕಾರಿಗಳ ಬೆಂಬಲವಿದೆ ಎಂಬ ಆರೋಪಗಳು ಕೇಳಿ ಬಂದಿವೆ. ಜೊತೆಗೆ ಕೆಲ ಅಧಿಕಾರಿಗಳಿಂದಲೂ ಅವರ ಪೋನ್ ಪೇ ನಂಬರಗೆ ದೊಡ್ಡ ಮೊತ್ತದ ಹಣ ವರ್ಗಾವಣೆಯಾಗಿದೆ ಎನ್ನಲಾಗುತ್ತಿದೆ. ಈಗಾಗಲೇ ನಮ್ಮ ಪೋಲಿಸ ಇಲಾಖೆಯ ಅಧಿಕಾರಿಗಳು ಕವಿತಾ ಬಾಡನವರ ಅವರ ಮೋಬೈಲ್ ಸೀಜ್ ಮಾಡಿ ಪೋಲಿಸ್ ಇಲಾಖೆಯ ಎಫ್‌ಎಸ್‌ಎಲ್‌ಗೆ ಕಳಿಸಿದ್ದಾರೆ. ಅದರ ಸಂಪೂರ್ಣ ವರದಿ ಬಂದ ನಂತರ ಆ ಕವಿತಾಗೆ ಬೆಂಬಲವಿರುವ ಪ್ರಭಾವಿ ವ್ಯಕ್ತಿಗಳು ಹಾಗೂ ಪ್ರಕರಣದ ಮುಖ್ಯ ಕಿಂಗ್‌ಪಿನ್ ಯಾರು ಎಂಬ ಮಾಹಿತಿ ಸಿಗಲಿದೆ. ಈ ಕೆಸ್‌ನಲ್ಲಿ ಎಂತಹದೇ ಪ್ರಭಾವಿ ಅಧಿಕಾರಿಗಳು ಮತ್ತು ವ್ಯಕ್ತಿಗಳಿಂದರೂ ಅವರ ಆಟವನ್ನು ನಡೆಸಲು ಬೀಡದೇ ಸರ್ಕಾರಕ್ಕೆ ವರದಿ ಸಲ್ಲಿಸಿ, ನಮ್ಮ ಆಯೋಗವು ತಪ್ಪಿತಸ್ಥರಿಗೆ ಕಠಿಣ ಶೀಕ್ಷೆ ಕೊಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತದೆ ಎಂದರು.

**ಮೂಡಲಗಿ ತಾಲೂಕಿನಲ್ಲಿಯೂ ಕವಿತಾ ಕ್ಲಿನಿಕ್! :**

ಭ್ರೂಣಹತ್ಯೆ ಕೇಸ್‌ನಲ್ಲಿ ಬಂಧಿಯಾಗಿರುವ ಕವಿತಾ ಬಾಡವರ ಅವರು ಹೆಣ್ಣುಭ್ರೂಣ ಹತ್ಯೆ ಪತ್ತೆಯ ಸ್ಕ್ಯಾನಿಂಗ್‌ಗಾಗಿ ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲೂಕಿನ ಢವಳೇಶ್ವರ ಗ್ರಾಮದಲ್ಲಿ ಶ್ರಾವಣಿ ಹೆಸರಿನಲ್ಲಿ ಕ್ಲೀನಿಕ್ ನಡೆಸುತ್ತಿದ್ದರು ಎಂಬ ಮಾಹಿತಿಯ ಔಷಧಿ ಚೀಟಿ ಸಿಕ್ಕಿದ್ದರಿಂದ ಗೋಕಾಕ್ ಟಿಎಚ್‌ಓ ಅವರನ್ನು ಸಂಪರ್ಕಿಸಿದಾಗ ಮೊದಲು ಇತ್ತು, ಕಳೆದ ಮೂರು ತಿಂಗಳಿನಿಂದ ಅಲ್ಲಿ ಕ್ಲೀನಿಕ್ ಇಲ್ಲ ಎಂಬ ಮಾಹಿತಿ ಸಿಕ್ಕಿದೆ. ಆದರೂ ಸಹ ಬಾಗಲಕೋಟೆ ಡಿಎಚ್‌ಓ ಅವರಿಗೆ ಬೆಳಗಾವಿ ಡಿಎಚ್‌ಓ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಪತ್ರ ಬರೆದು ಸ್ಥಳ ಪರಿಶೀಲನೆ ನಡೆಸಿ ಆಯೋಗಕ್ಕೆ ವರದಿ ನೀಡಲು ತಿಳಿಸಿದ್ದೇನೆ. ಜೊತೆಗೆ ಜಮಖಂಡಿ ಎಸಿ ಅವರಿಗೆ ಕೂಡಾ ಢವಳೇಶ್ವರ ಗ್ರಾಮಕ್ಕೆ ಭೇಟಿ ನೀಡಿ ಮಾಹಿತಿ ಕಲೆ ಹಾಕಲು ಸೂಚಿಸಿದ್ದೇವೆ ಎಂದರು.

**ಆರೋಪಿ ಕವಿತಾಳ ನಕಲಿ ಡಿಗ್ರಿ ? :**

ಭ್ರೂಣಹತ್ಯೆ ಆರೋಪಿ ಕವಿತಾ ಬಾಡನವರ ಬೆಳಗಾವಿ ಜಿಲ್ಲೆ ಮೂಡಲಗಿ ತಾಲ್ಲೂಕಿನ ಢವಳೇಶ್ವರದಲ್ಲಿ ನಡೆಸುತ್ತಿದ್ದ ಶ್ರಾವಣಿ ಕ್ಲೀನಿಕ್‌ನ ಔಷಧಿ ಚೀಟಿಯು ಆಯೋಗದ ಸದಸ್ಯರಿಗೆ ಸಿಕ್ಕಿದೆ. ವಿಚಿತ್ರವೆಂದರೆ ಚೀಟಿಯಲ್ಲಿ ಕೆ.ಸಿ.ಬಾಡನವರ ಎಂ.ಬಿ.ಇ.ಎಚ್ ಎಂದು ತಮ್ಮ ಡಿಗ್ರಿಯನ್ನು ನಮೂದಿಸಿಕೊಂಡಿದ್ದಾರೆ. ಈ ಕುರಿತು ಡಿಎಚ್‌ಓ ಅವರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಅಂತಹ ಯಾವುದೇ ಕೋರ್ಸಗಳು ಇಲ್ಲ ಎಂದು ಆಯೋಗದ ಸದಸ್ಯರಿಗೆ ಮಾಹಿತಿ ನೀಡಿದರು.

**ನಕಲಿ ವೈದ್ಯರ ಮೇಲೆ ನಿಗಾ ಇರಿಸಿ :**

ಬಾಗಲಕೋಟೆ ಜಿಲ್ಲೆಯಲ್ಲಿ 183 ಒಟ್ಟು ಸ್ಕ್ಯಾನಿಂಗ್ ಸೆಟಂರ್‌ಗಳಿವೆ. ಮಹಾಲಿಂಗಪುರದಲ್ಲಿ ಮೂರು ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲೆ ಪಿಸಿಆರ್ ಮಾಡಲಾಗಿದೆ. ಜೊತೆಗೆ ಬಾಗಲಕೋಟೆ ಜಿಲ್ಲೆಯಲ್ಲಿಯೇ ಅದರಲ್ಲೂ ಮುಧೋಳ, ಮಹಾಲಿಂಗಪುರ ಭಾಗದಲ್ಲಿ ನಕಲಿ ವೈದ್ಯರ ಹಾವಳಿ ಹೆಚ್ಚಾಗಿರುವ ಮಾಹಿತಿಯು ಆಯೋಗದ ಗಮನಕ್ಕೆ ಬಂದಿದೆ. ಆರೋಗ್ಯ ಇಲಾಖೆ, ಜಿಲ್ಲಾ ಕುಟುಂಬ ಕಲ್ಯಾಣ ಇಲಾಖೆ, ಟಿಎಚ್‌ಓ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳು ನಕಲಿ ವೈದ್ಯರ ಮೇಲೆ ಸೂಕ್ತ ನಿಗಾ ಇರಿಸಿ, ಮತ್ತೊಮ್ಮೆ ಇಂತಹ ಯಾವುದೇ ಪ್ರಕರಣಗಳು ನಡೆಯದಂತೆ ಕಟ್ಟೆಚ್ಚರ ವಹಿಸಬೇಕು ಎಂದರು.

**ಸಾಂಗಲಿ ಜಿಲ್ಲಾಧಿಕಾರಿ ಮತ್ತು ಪೊಲೀಸ್ ಇಲಾಖೆಗೆ ಪತ್ರ :**

ಭ್ರೂಣಹತ್ಯೆ ಕೇಸ್‌ನಲ್ಲಿ ಶಾಮೀಲಾಗಿರುವ ವ್ಯಕ್ತಿಗಳನ್ನು ಪೋಲಿಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಬಾಗಲಕೋಟೆ ಜಿಲ್ಲಾಧಿಕಾರಿಗಳ ಮೂಲಕ ಸಾಂಗಲಿ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ಇಲಾಖೆಗೆ ಪತ್ರಬರೆಯಲು ತಿಳಿಸಿ, ಪ್ರಕರಣದಲ್ಲಿ ಭಾಗಿಯಾದ ಸ್ಕ್ಯಾನಿಂಗ್ ವೈದ್ಯರ ಮೇಲೆ ಕ್ರಮ ಹಾಗೂ ಆಸ್ಪತ್ರೆಯನ್ನು ಸೀಜ್ ಮಾಡಲು ಕ್ರಮ ಕೈಗೊಳ್ಳುವಂತೆ ಪತ್ರ ಬರೆಯಲು ತಿಳಿಸಿದ್ದೇವೆ. ಪ್ರಕರಣದ ಸಂಪೂರ್ಣ ವರದಿಯನ್ನು ಪಡೆದುಕೊಂಡು ನಮ್ಮ ಆಯೋಗದಿಂದ ಮತ್ತೊಂದು ಕೇಸ್ ದಾಖಲಿಸಿಕೊಂಡು ಕೇಸ್‌ನಲ್ಲಿ ಭಾಗಿಯಾದವರಿಗೆ ಸಮನ್ಸ್ ಜಾರಿ ಮಾಡುತ್ತೇವೆ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಹೇಳಿದರು.

**ಇಂತಹ ಘಟನೆ ಮರುಕಳಿಸದಂತೆ ಕ್ರಮ :**

ಭ್ರೂಣಹತ್ಯೆ ಕೇಸ್‌ನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಇಲಾಖೆಯ ಅಧಿಕಾರಿಗಳು ಪೋಲಿಸ್ ಇಲಾಖೆಗೆ ಸಂಪೂರ್ಣ ಸಹಕಾರ ನೀಡುವ ಮೂಲಕ ತಪ್ಪಿತಸ್ಥರಿಗೆ ಶೀಕ್ಷೆಯಾಗಬೇಕು. ಮುಂದೆ ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ನಡೆಯದಂತೆ ಅಧಿಕಾರಿಗಳು ಗಮನ ಹರಿಸಬೇಕು. ಇಂತಹ ನಕಲಿ ವೈದ್ಯರ ಹಾಗೂ ಭ್ರೂಣಹತ್ಯೆ ಮಾಡುವ ಮಾಹಿತಿ ಸಿಕ್ಕಲ್ಲಿ ಆಯೋಗದಿಂದಲೇ ದಾಳಿ ನಡೆಸಿ, ಕೇಸ್ ದಾಖಲಿಸಿಕೊಂಡು ತಪ್ಪಿತಸ್ಥರಿಗೆ ಶೀಕ್ಷೆ ಕೊಡಿಸಲು ಪ್ರಯತ್ನಿಸುತ್ತದೆ ಎಂದರು.

### ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಮೇಲೆ ಸೂಕ್ತಕ್ರಮಕ್ಕೆ ಸೂಚನೆ

**ಈ ಭ್ರೂಣಹತ್ಯೆ ಪ್ರಕರಣವನ್ನು ಗಮನಿಸಿದಾಗ ಜಿಲ್ಲಾ ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಅರವಿಂದ ಪಟ್ಟಣಶೆಟ್ಟಿ ಅವರ ನಿರ್ಲಕ್ಷ್ಯವೇ ಎದ್ದು ಕಾಣುತ್ತಿದೆ. ಮುಖ್ಯವಾಗಿ ಅರವಿಂದ ಪಟ್ಟಣಶೆಟ್ಟಿ ಅವರು ಮೂಲತ: ಮಹಾಲಿಂಗಪುರದವರಾಗಿದ್ದು ಸಂಶಯಕ್ಕೆ ಎಡೆಮಾಡಿದೆ. ಜಮಖಂಡಿ ಎಸಿ ಮತ್ತು ಬಾಗಲಕೋಟೆ ಜಿಲ್ಲಾಧಿಕಾರಿಗಳಿಗೆ ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಯ ಮೇಲೆ ಸೂಕ್ತಕ್ರಮ ಕೈಗೊಂಡು ಆಯೋಗಕ್ಕೆ ವರದಿ ನೀಡಲು ತಿಳಿಸಿದ್ದೇನೆ.**

**। ಶಶಿಧರ ಕೋಸಂಬೆ.**
**ಸದಸ್ಯರು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ**

**ಆಯೋಗ್ಯದ ಸದಸ್ಯರ ಭೇಟಿಯ ಸಮಯದಲ್ಲಿ ಭಾಗಲಕೋಟೆ ಡಿಎಚ್‌ಓ ಡಾ.ರಾಜಕುಮಾರ ಯರಗಲ್ಲ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಅರವಿಂದ ಪಟ್ಟಣಶೆಟ್ಟಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ವೀಣಾ ಎಂ, ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಈರಣಗೌಡ ಪಾಟೀಲ, ಜಮಖಂಡಿ ಎಸಿ ಸಂತೋಷ ಕಾಮಗೌಡ, ರಬಕವಿ–ಬನಹಟ್ಟಿ ತಹಶೀಲ್ದಾರ ಗಿರೀಶ ಸ್ವಾದಿ, ಮುಧೋಳ ಟಿಎಚ್‌ಓ ವೆಂಕಟೇಶ ಮಲಘಾಣ, ಜಮಖಂಡಿ ಡಿವೈಎಸ್‌ಪಿ ಶಾಂತವೀರ ಈ, ಬನಹಟ್ಟಿ ವೃತ್ತದ ಸಿಪಿಆಯ್ ಸಂಜೀವ ಬಳಗಾರ, ಸ್ಥಳೀಯ ಠಾಣಾಧಿಕಾರಿ ಪ್ರವೀಣ ಬೀಳಗಿ, ಪುರಸಭೆ ವ್ಯವಸ್ಥಾಪಕ ಎಸ್.ಎಂ.ಪಾಟೀಲ, ಆರೋಗ್ಯ ನಿರೀಕ್ಷಕ ಎಂ.ಎಂ.ಮೂಗಳಖೋಡ, ಕಿರಿಯ ಆರೋಗ್ಯ ನಿರೀಕ್ಷಕ ರಾಜು ಹೂಗಾರ, ಸಮುದಾಯ ಆರೋಗ್ಯದ ಕೇಂದ್ರ ವೈದ್ಯಾಧಿಕಾರಿ ಸಿ.ಎಂ.ವಜ್ಜರಮಟ್ಟಿ ಸೇರಿದಂತೆ ಹಲವರು ಇದ್ದರು.**

## ತೋಟಗಾರಿಕೆ ತರಬೇತಿ ಜೂ.6 ರಂದು ಸಂದರ್ಶನ

**ವಿಜಯಪುರ :** 2024–25ನೇ ಸಾಲಿನಲ್ಲಿ ತೋಟಗಾರಿ–ಕೆ ಇಲಾಖೆಯಿಂದ 10 ತಿಂಗಳುಗಳ ಕಾಲ ತೋಟಗಾರಿಕೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಲೋಕಸಭೆ ಚುನಾವಣೆಯ ನೀತಿ ಸಂಹಿತೆ ಜಾರಿ ಯ ಕಾರಣದಿಂದ ತರಬೇತಿ ಅವಧಿಯನ್ನು ಜುಲೈ 1ರಿಂದ 2025 ರ ಮಾರ್ಚ್ 31ರವವರೆಗೆ 9 ತಿಂಗಳು ಅವಧಿಕೆ ಪರಿಷ್ಕರಿಸಲಾಗಿದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಜೂನ್ 6 ರಂದು ಸಂದರ್ಶನ ನಿಗದಿಪಡಿಸಲಾಗಿದೆ. ಜೂನ್ 10 ರಂದು ಆಯ್ಕೆ ಪಟ್ಟಿ ಹಾಗೂ ಪ್ರವೇಶ ಪತ್ರ ನೀಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳು ಜೂನ್ 15 ರಂದು ತರಬೇತಿಗೆ ಹಾಜರಾಗಲು ಸೂಚಿಸಲಾಗುವುದು. ವಿಜಯಪುರ ಜಿಲ್ಲೆಯಿಂದ ಒಟ್ಟು 17 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಬೆಳಗಾವಿಯ ಹಿಡಕಲ್ ಡ್ಯಾಂ ತೋಟಗಾರಿಕೆ ಇಲಾಖೆಯಲ್ಲಿ ತರಬೇತಿ ನೀಡಲಾಗುತ್ತದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಭ್ರೂಣಹತ್ಯೆ ಪ್ರಕರಣ: ಮತ್ತೇ ಇಬ್ಬರು ಪ್ರಮುಖ ಆರೋಪಿಗಳ ಬಂಧನ





**ಮಹಾಲಿಂಗಪುರ :** ಪಟ್ಟಣದ ಜಯಲಕ್ಷ್ಮೀ ನಗರದ ನಕಲಿ ವೈದ್ಯೆ ಕವಿತಾ ಬಾಡನವರ ಅವರಿಂದ ಗರ್ಭಪಾತ ಮಾಡಿಸಿಕೊಂಡು ಮೃತಳಾದ ಮಹಾರಾಷ್ಟ್ರದ ಮೂಲದ ಸೋನಾಲಿ ಕದಂ ಕೇಸ್‌ಗೆ ಸಂಬಂಧಿಸಿದಂತೆ ಪ್ರಕರಣದ ಪ್ರಥಮ, ದ್ವಿತೀಯ ಆರೋಪಿಗಳಾದ ಸಾಂಗಲಿ ಜಿಲ್ಲೆಯ ದುದಗಾಂವ ಗ್ರಾಮದ ನಿವಾಸಿಗಳಾದ ಮೃತ ಸೋನಾಲಿ ತಂದೆ ಸಂಜಯ ಗೌಳಿ, ತಾಯಿ ಸಂಗೀತಾ ಗೌಳಿ ಅವರನ್ನು ಮಹಾಲಿಂಗಪುರ ಪೊಲೀಸರು ಗುರುವಾರ ರಾತ್ರಿ ಬಂಧಿಸಿ, ಶುಕ್ರವಾರ ಮುಂಜಾನೆ ಮಹಾಲಿಂಗಪುರ ಠಾಣೆಗೆ ಕರೆತಂದು ಜಮಖಂಡಿ ಡಿವೈಎಸ್‌ಪಿ ಶಾಂತಕುಮಾರ ಈ, ಬನಹಟ್ಟಿ ಸಿಪಿಆಯ್ ಸಂಜೀವ ಬಳಗಾರ ಸಮ್ಮುಖದಲ್ಲಿ ಠಾಣಾಧಿಕಾರಿ ಪ್ರವೀಣ ಬೀಳಗಿ ಅವರು ಭ್ರೂಣಹತ್ಯೆಯ ಪ್ರಕರಣದ ವಿಚಾರಣೆ ನಡೆಸಿ, ನ್ಯಾಯಾಲಯ ಹಾಜುರುಪಡಿಸಿ ಮಾಡಿ ಜಮಖಂಡಿ ಜೈಲಿಗೆ ಒಪ್ಪಿಸಿದ್ದಾರೆ.

ಜಾಮೀನು ಅರ್ಜಿ ತೀರಸ್ಕಾರ : ಇಲ್ಲಿಯವರೆಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರನ್ನು ಬಂಧಿಸಲಾಗಿದೆ. ಅಥಣಿಯ ರಾಮಾನಂದ ನಗರದ ಡಾ.ಕೊತ್ವಾಲೆ, ಮಿರಜ ಸ್ಕ್ಯಾನಿಂಗ್ ಸೆಂಟರ್‌ನ ಸೋನೋಗ್ರಾಫರ್ ಅವರನ್ನು ಬಂಧಿಸಬೇಕಾಗಿದೆ. ಗರ್ಭಪಾತ ಮಾಡಿಸಿದ ಆರೋಪಿ ಮಹಾಲಿಂಗಪುರದ ಕವಿತಾ ಬಾಡನವರ ಗುರುವಾರ ತಮ್ಮ ವಕೀಲರ ಮೂಲಕ ಕೋರ್ಟಗೆ ಜಾಮೀನು ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಜಮಖಂಡಿ ಕೋರ್ಟ ಅವರ ಜಾಮೀನು ಅರ್ಜಿಯನ್ನು ತೀರಸ್ಕಾರ ಮಾಡಿದೆ.

ಒಂದು ಭ್ರೂಣಹತ್ಯೆಗೆ 2ಲಕ್ಷ : ತನ್ನ ಮನೆಯಲ್ಲಿಯೇ ಅಕ್ರಮವಾಗಿ ಭ್ರೂಣಹತ್ಯೆ ಮಾಡುತ್ತಿದ್ದ ಕವಿತಾ ಬಾಡನವರ, ಗರ್ಭಪಾತಕ್ಕೆ ಮೊದಲು ಚಿಕಿತ್ಸೆ ನೀಡುತ್ತಿದ್ದ ಸಾಂಗಲಿಯ ವೈದ್ಯ ಡಾ. ಮಾರುತಿ, ಗಂಡು ಹೆಣ್ಣು ಎಂಬ ಪತ್ತೇ ಮಾಡುತ್ತಿದ್ದ ಮಿರಜ್ ಸ್ಕ್ಯಾನಿಂಗ್ ಸೆಂಟರ್ ಸೋನೋಗ್ರಾಪರ್, ಅಥಣಿಯ ಡಾ.ಕೋತ್ವಾಲೆ ಸೇರಿ ಒಂದು ಭ್ರೂಣಹತ್ಯೆಗೆ ಬರೊಬ್ಬರಿ 2 ಲಕ್ಷ ಹಣವನ್ನು ಪಡೆಯುತ್ತಿದ್ದರು ಎಂದು ಬಂಧಿತ ಸಂಜಯ ಗೌಳಿ, ಸಂಗೀತಾ ಗೌಳಿ ಪೊಲೀಸರ ವಿಚಾರಣೆಯಲ್ಲಿ ತಿಳಿಸಿದ್ದಾರೆ ಎನ್ನಲಾಗಿದೆ.

## ಉರ್ದು ಶಾಲೆಗೆ ಅಧಿಕಾರಿಗಳ ತಂಡ ಭೇಟಿ ಪರಿಶೀಲನೆ





**ಚಿಮ್ಮಡ :** ಗ್ರಾಮದ ಸರಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳ ತಂಡ ಬುಧವಾರದಂದು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇಲ್ಲಿನ ಉರ್ದು ಶಾಲೆಯ ದುಸ್ಥಿತಿಯ ಕುರಿತು ಬುಧವಾರ ಪತ್ರಿಕೆಯಲ್ಲಿ ಪ್ರಕಟವಾದ 'ಶಿಥಿಲ ಕೊಠಡಿಯಲ್ಲೇ ಮಕ್ಕಳಿಗೆ ವಿದ್ಯಾರ್ಜನೆ ಎಂಬ ತಲೆಬರಹದ ವಿಶೇಷ ವರದಿ ಪ್ರಕಟಿಸಿದ ದಿನವೇ ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಪಂಚಾಕ್ಷರಿ ನಂದೇಶ್ವರ, ಪ್ರಭಾರಿ ಕ್ಷೇತ್ರ ಸಮನ್ವಯಾಧಿಕಾರಿ ಆರ್.ಎಸ್. ಅವಟಿ, ಉರ್ದುವಿಭಾಗದ ಶಿಕ್ಷಣ ಸಂಯೋಜಕಿ ಶ್ರೀಮತಿ ಸಮೀನಾ ಕೌಸರ, ಸಮೂಹ ಸಂಪನ್ಮೂಲ ವ್ಯಕ್ತಿಗಳಾದ ಎ.ಐ. ಬಾಗೇವಾಡಿಯವರು ಶಾಲೆಗೆ ಭೇಟಿನೀಡಿ ಪರಿಶೀಲನೆ ನಡೆಸಿ ಶಾಲಾ ಮುಖ್ಯೋಪಾದ್ಯಾಯ ಝೆಡ್.ಎಚ್. ಇಂಡಿಕರ ಅವರಿಂದ ಮಾಹಿತಿ ಪಡೆದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎ.ಕೆ. ಬಸನ್ನವರ ಪತ್ರಿಕೆಯೊಂದಿಗೆ ಮಾತನಾಡಿ ಶಿಥಿಲ ಕೊಠಡಿಗಳನ್ನು ತರಗತಿ ನಡೆಸಲು ಹಾಗೂ ಬಿಸಿಯೂಟದ ಅಡುಗೆ ತಯಾರಿಸಲು ಬಳಸಬಾರದೆಂದು ಮುಖ್ಯ ಗುರುಗಳಿಗೆ ಸೂಚಿಸಲಾಗಿದ್ದು ಕೆರೆ ದಂಡೆಮೇಲೆ ನಿರ್ಮಿಸಲಾಗಿರುವ ಸುಸಜ್ಜಿತ ಕೊಠಡಿಗಳನ್ನು ದುರಸ್ಥಿ ಹಾಗೂ ಸ್ವಚ್ಛಗೊಳಿಸಿ ಕಛೇರಿಗಾಗಿ ಬಳಕೆ ಮಾಡಬೇಕೆಂದು ಸೂಚಿಸಲಾಗಿದ್ದು ಆದಷ್ಟು ಬೇಗ ಶಾಲೆಗೆ ಅವಶ್ಯವಿರುವಷ್ಟು ನೂತನ ಕೊಠಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೆಂದರು.

## ಸಾಮಾಜಿಕ ನ್ಯಾಯದಡಿ ಸುಣಗಾರ ಅವರಿಗೆ ಮೇಲ್ಮನೆಗೆ ಆಯ್ಕೆ ಮಾಡಿ



**ತಾಳಿಕೋಟೆ :** ವಿಧಾನ ಸಭಾ ಭಲದ ಆಧಾರದ ಮೇಲೆ ವಿಧಾನಪರಿಷತ್‌ಗೆನಡೆಯುತ್ತಿರುವಚುನಾವಣೆಯಲ್ಲಿ ಕಾಂಗ್ರೇಸ್‌ಪಕ್ಷದವತಿಯಿಂದಸಾಮಾಜಿಕನ್ಯಾಯದಡಿ ಮತ್ತು ಹಿಂದೂಳಿದ ಕೋಟಾದಡಿ ಮಾಜಿ ಶಾಸಕ ಶರಣಪ್ಪ ಸುಣಗಾರ ಅವರಿಗೆ ಗುರುತಿಸಿ ಟಿಕೆಟ್ ನೀಡಿ ಆಯ್ಕೆ ಮಾಡಬೇಕೆಂದು ಪುರಸಭಾ ಸದಸ್ಯ ಕಾಂಗ್ರೇಸ್‌ಮುಖಂಡಪರಶುರಾಮತಂಗಡಗಿಅವರು ಒತ್ತಾಯಿಸಿದರು.

ಮಂಗಳವಾರರಂದು ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಿಂದೂಳಿದ ಸಮಾಜಗಳ ವತಿಯಿಂದ ಕರೆಯಲಾದ ಪತ್ರಿಕಾ ಘೋಷ್ಠಿಯಲ್ಲಿ ಮಾತನಾಡುತ್ತಿದ್ದಅವರುಮಾಜಿಶಾಸಕಶರಣಪ್ಪಸು–ಣಗಾರಅವರುಕಳೆದ40ವರ್ಷಗಳಿಂದಲೂಕಾಂಗ್ರೇಸ್ ಪಕ್ಷದಸಂಘಟನಾತ್ಮಕಕೆಲಸಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಂಡಂತಹವ್ಯಕ್ತಿಯಾಗಿದ್ದಾರೆಜಿಲ್ಲೆಯಎಲ್ಲ ವಿಧಾನ ಸಭಾ ಕ್ಷೇತ್ರಗಳಲ್ಲಿ ಕಾರ್ಯಕರ್ತರೊಂದಿಗೆ ಬೆರೆತುಕೊಳ್ಳುವಂತಹ ವ್ಯಕ್ತಿಯಾಗಿದ್ದಾರೆ ಈ ಹಿಂದೆ ಸಿಂಧಗಿ ಮತಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ ಅವರಿಗೆ ರಾಜಕೀಯ ಸಾಕಷ್ಟು ಅನುಭವವೂ ಕೂಡಾ ಇದ್ದು ಹಿಂದೂಳಿದ ವರ್ಗಗಳ ಕೋಟಾದಡಿ ಪಕ್ಷದಲ್ಲಿ ಯಾವುದೇ ಸ್ಥಾನಮಾನವೂ ಕೂಡಾ ಸಿಕ್ಕಿಲ್ಲಾ ಹೀಗಾಗಿ ಸುಣಗಾರ ಅವರನ್ನು ಮೇಲ್ಮನೆ ಚುನಾವಣೆಗೆ ಕಾಂಗ್ರೇಸ್ ಪಕ್ಷದ ಟಿಕೇಟ್ ನೀಡುವದರೊಂದಿಗೆ ಆಯ್ಕೆಗೊಳಿಸಬೇಕೆಂದು ಎಲ್ಲ ಸಮಾಜಗಳ ಪರವಾಗಿ ಕಾಂಗ್ರೇಸ್ ಪಕ್ಷದ ವರಷ್ಠಲ್ಲಿ ಒತ್ತಾಯಿಸುತ್ತೇವೆಂದ ಅವರು ಮಾಜಿ ಶಾಸಕ ಶರಣಪ್ಪ ಸುಣಗಾರ ಅವರು ಮಲ್ಲಿಕಾರ್ಜುನ ಖರ್ಗೆ ಅವರ ಗರಡಿಯಲ್ಲಿ ಫಳಗಿದವರಾಗಿದ್ದಾರೆ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹಾಗೂ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ ಅವರ ಆಪ್ತರಲ್ಲಿಯೂ ಕೂಡಾ ಒಬ್ಬರಾಗಿದ್ದು ಇವರನ್ನು ವಿಧಾನ ಪರಿಷತ್ತಿಗೆ ಆಯ್ಕೆ ಮಾಡುವದರಿಂದ ಜಿಲ್ಲೆಯಲ್ಲಿ ಕಾಂಗ್ರೇಸ್ ಪಕ್ಷಕ್ಕೆ ಇನ್ನಷ್ಟು ಭಲ ತುಂಬಲಿದೆ ಅಲ್ಲದೇ ಕಾರ್ಯಕರ್ತರಲ್ಲಿ ಇನ್ನಷ್ಟು ಹುರುಪು ಮೂಡಲಿದೆ ಎಂದರು.

ಇನ್ನೋರ್ವ ಅಂಬಿಗೇರ ಸಮಾಜದ ನಗರ ಘಟಕದ ಅಧ್ಯಕ್ಷ ರಮೇಶ ಮೂಕೀಹಾಳ ಅವರು ಮಾತನಾಡಿ ಮಾಜಿ ಶಾಸಕ ಸುಣಗಾರ ಅವರು ಜಿಲ್ಲೆಯಲ್ಲಿ ಕಾಂಗ್ರೇಸ್ ಪಕ್ಷದ ಹಿರಿಯ ಮುತ್ಸದ್ದಿಗಳಲ್ಲಿ ಒಬ್ಬರಾಗಿದ್ದಾರೆ ಮತ್ತು ಕಾರ್ಯಕರ್ತರ ಸಮಸ್ಯೆಗಳಿಗೆ ಸ್ಪಂದಿಸುವಂತಹ ಮನೋಭಾವನೆ ಹೊಂದಿದಂತಹ ವ್ಯಕ್ತಿಯಾಗಿದ್ದಾರೆ ಕಾಂಗ್ರೇಸ್ ಪಕ್ಷವನ್ನು ಜಿಲ್ಲೆಯಲ್ಲಿ ಕಟ್ಟಿ ಬೆಳೆಸುವಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತಾ ಬಂದವರಾಗಿದ್ದಾರೆ ಇಂತಹ ಪಕ್ಷ ನಿಷ್ಠ ವ್ಯಕ್ತಿ ಸು–ಣಗಾರ ಅವರಿಗೆ ವಿಧಾನ ಪರಿಷತ್ ಚುನಾವಣೆಯಲ್ಲಿ ಗುರುತಿಸಿ ಟಿಕೆಟ್ ನೀಡಿ ಆಯ್ಕೆಗೊಳಿಸಿದಲ್ಲಿ ಜಿಲ್ಲೆಯಲ್ಲಿ ಪಕ್ಷವು ಇನ್ನಷ್ಟು ಭಲಿಷ್ಠಗೊಳ್ಳುವದರಲ್ಲಿ ಯಾವದೇ ಸಂಶಯವಿಲ್ಲಾವೆಂದರು. ಇನ್ನೋರ್ವ ಮುಖಂಡ ಶಾಂತು ಹೊಸಕೇರಿ, ಮತ್ತು ವಿಶ್ವನಾಥ ತಳವಾರ(ಅಸ್ಕಿ) ಅವರು ಮಾತನಾಡಿ ಮಾಜಿ ಶಾಸಕ ಶರಣಪ್ಪ ಸುಣಗಾರ ಅವರು ಕಾಂಗ್ರೇಸ್ ಪಕ್ಷದ ಏಳಿಗೆಗಾಗಿ ದುಡಿದಂತಹ ವ್ಯಕ್ತಿಯಾಗಿದ್ದಾರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ದೇವರ ಹಿಪ್ಪರಗಿ ಮತಕ್ಷೇತ್ರಕ್ಕೆ ಅಲ್ಪದಿನಗಳಲ್ಲಿಯೇ ಟಿಕೇಟ್ ಘೋಷಣೆ ಮಾಡಿದ್ದರಿಂದ ಕ್ಷೇತ್ರದ ಎಲ್ಲ ಗ್ರಾಮಗಳಿಗೆ ಪ್ರಚಾರಕ್ಕೆ ತೆರಳಲು ಆಗಲಿಲ್ಲಾ ಹೀಗಾಗಿ ಸೋಲನ್ನು ಅನುಭವಿಸಬೇಕಾಯಿತು ಸಾಮಾಜಿಕ ಮಾನದಂಡದಡಿ ಶರಣಪ್ಪ ಸುಣಗಾರ ಅವರಿಗೆ ವಿಧಾನ ಪರಿಷತ್‌ಗೆ ಆಯ್ಕೆಗೊಳಿಸುವ ಕಾರ್ಯ ಕಾಂಗ್ರೇಸ್ ಪಕ್ಷದ ಹೈಕಮಾಂಡ ಮಾಡಬೇಕೆಂದು ಒತ್ತಾಯಿಸಿದರು. ಇನ್ನೋರ್ವ ಮುಖಂಡ ತೋಟಪ್ಪ ಏವೂರ ಅವರು ಶರಣಪ್ಪ ಸುಣಗಾರ ಅವರಿಗೆ ವಿಧಾನ ಪರಿಷತ್‌ಗೆ ಆಯ್ಕೆಗೊಳಿಸುವದರೊಂದಿಗೆ ಪರಿಷತ್ತಿನಲ್ಲಿ ಹೆಚ್ಚಿನ ಶಕ್ತಿ ಬರಲಿದೆ ಪಕ್ಷಕ್ಕಾಗಿ ದುಡಿದಂತಹ ಕಾರ್ಯಕರ್ತರಿಗೆ ಮಾನ್ಯತೆ ನೀಡಿದಂತಾಗಲಿದೆ ಎಂದರು. ಈ ಸಮಯದಲ್ಲಿ ಮುಖಂಡರುಗಳಾದ ದೇವೇಂದ್ರ ಪೂಜಾರಿ(ಗೊಟಗುಣಕಿ), ಮಾನಪ್ಪ ನಾಯ್ಕೋಡಿ, ಕಾಶಿನಾಥ ಮದರಿ, ಈರಪ್ಪ ನಾಯ್ಕೋಡಿ, ಮಡಿವಾಳಪ್ಪ ಚಿಗರಿ, ಮಲ್ಲಿಕಾರ್ಜುನ ಮದರಿ, ಮಲ್ಲಿಕಾರ್ಜುನ ನೆಲ್ಲಗಿ, ಭೀಮಣ್ಣ ತಳವಾರ, ಸಂಗಮೇಶ ಮದರಿ, ಗೋಪಾಲ ಸುರಪೂರ, ಶಾಂತಪ್ಪ ಇಣಚಗಲ್ಲ, ಜಾಜನಗೌಡ ಬಿರಾದಾರ, ಸಂಗಮೇಶ ಅಂಬಿಗೇರ (ಕಲ್ಲದೇವನಹಳ್ಳಿ), ಸಂಗಮೇಶ ಅಂಬಿಗೇರ(ವನಹಳ್ಳಿ), ದಂಡಪ್ಪ ಬಡಿಗೇರ, ಬಸವರಾಜ ತಳವಾರ, ಮಲ್ಲೇಶ ತಳವಾರ, ಸಚೀನ ತಳವಾರ, ಬಸವರಾಜ ಗುಡ್ಡಕಾಯಿ, ಮುತ್ತು ತಳವಾರ, ಸಿದ್ದು ವಾಲಿಕಾರ, ರಮೇಶ ಯಕ್ತಾಪೂರ, ರಾಜು ವಾಲಿಕಾರ, ಹನೀಪ ನೀರಲಗಿ, ಹರಿಸಿಂಗ್ ಪರಶುರಾಮ ಕೊಕಟನೂರ, ಮೊದಲಾದವರು ಇದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State